(MR. SPEAKER)

not been even a breach of the etiquette. There is therefore no need to call upon the Chief Minister to make any statement by way of explanation.

I would only say again to the Hon'ble members, that they should follow the procedure that is set out in chapter 20. Suddenly getting up and making an oral statement and raising that as a point of order and ultimately come to the question of privilege, puts the whole matter in an embarassing position. If Hon'ble members want to claim as a matter of privilege, they should follow the procedure set out in chapter 20.

---

## REPORT OF THE RESOURCES AND ECONOMY COMMITTEE.

*Motion to consider.*

(Debate continued).

Sri S. M. KRISHNA.—Sir, I was referring to various travels undertaken by Ministers. I said that a sum of Rs. 138 lakhs has been spent. I would not like that to go on record, that Ministers have spent Rs. 138 lakhs. It is Government officers that have drawn...

Mr. SPEAKER.—You mean, more than a lakh for every Minister.

Sri S. M. KRISHNA.—I hope it will never happen in this State or in this country.

Mr. SPEAKER.—I do not think so.

Sri S. M. KRISHNA.—Now, I have got to make a few observations on this question of travels of ministers. Sir, even the report of the committee points out that there has been considerable dissatisfaction both inside the House as well as outside, that these travels are arranged in haste, travels, which I may put it, whirlwind in nature, are being conducted by Ministers and Deputy Ministers. I think the call today is for austerity. The call given by men in authority is always to tighten the belt. But the question is where tightening of the belt should start. I for one feel that tightening of the belt should start right from the Chief Minister of a State. But today, how many instances can we on this side quote—of a Minister or a Deputy Minister making a journey of 120 miles to declare open a Sisu-Vihar. The amount spent on a Sisu-Vihar is about three to four thousand rupees. The Deputy Minister at the cost of the State makes a junket to a particular place to declare open a Sisu-Vihar. Sir, there is absolutely no justification for such a travel. Only the other day, I was paying compliment to certain of the Ministers who made a sudden dash to Ramanagaram when there was flood situation. I was the first to congratulate those Ministers because they went there, because the call of duty and patriotism forced them to go to Ramanagaram. But I will be the first one to declare vehemently if a Minister or Deputy Minister had undertaken a tour to declare open a Sisu-Vihar. I for one feel that such travels ought to be curbed and ought to be discouraged by the ruling party. On page 138 of the Report, it is said :

> "Thus the expenditure on Ministers and Deputy Ministers aggregates to Rs. 7,83,276 per mensem, exclusive of the depreciation on the value of cars, rent, electricity and water charges, etc. The expenditure on T.A. to Ministers is now more than a lakh of rupees a year and is on the increase. There is a strong public feeling regarding the rather unplanned and unsystematic touring by Ministers. We have no doubt about the sincere desire of the Ministers to keep in close touch with the people and to acquaint themselves with the conditions prevailing in the State. But in the public opinion the tours of the Ministers and Deputy Minister are too frequent and short to be of benefit to the people or economical expenditure."

I wholeheartedly agree with the suggestion made here that Ministers should make tours. I might, as a member representing a particular constituency, request the Minister to

visit certain spots in my area. But the visit or the travelling should be systematic, should be scientific. We go to a particular place today and again for another function, we go there again after a fortnight That does not bring credit to anybody. At this rate, in 1960-61, we had to spend nearly eight lakhs of rupees over expenses on Ministers. That was in the old days when the strength of the Cabinet was only twelve and there were about half-a-dozen Deputy Ministers. But today the Ministry has increased. Naturally the amount that we will be spending hereafter on the Ministers is going to be, on a conservative estimate, double, easily. So, we can very easily infer that we will be spending about fifteen lakhs of rupees every year. On this, my learned friend Sri Krishna Shetty called non-developmental expenditure of the State. I would not be that harsh. I think tours undertaken by Ministers will do good sometimes, but by and large, the Ministers will have to be very cautious in their travelling, in their touring. But some of these travels take the shape of political junkets and social junkets. A junket is one wherein a Minister travels at the expense of the common man or at the expense of the tax-payer. I think this report will certainly drive home the point that hereafter at least, these Ministers will be very discreet in their tours.

Sir, I will make a passing reference to the administration at the level of the district. Today, we find that the Deputy Commissioner or the Collector is the mouth-piece of the Government, in the sense, he makes certain important decisions for implementing a particular policy or plan made by the Government. But my own experience is that the Deputy Commissioner of a district is burdened with work. The Deputy Commissioner has got not only certain administrative duties but also certain quasi-judicial duties attached to his office. In order to do justice to administrative as also quasi-judicial duties. I think the Deputy Commissioner should be rid of certain responsibilities. For example, at the district level, the Deputy Commissioner is directly in charge of arranging Independence Day functions, Republic Day parties, and what not. Sir, it is a very said commentary that a free nation after nearly fifteen years should still depend on a governmental officer to rejoice on the day of independence or on the Republic day.

I think the work of the Deputy Commissioner is considerably dislocated as he will have to put in more of his efforts and to that extent the governamental work suffers. So, the Deputy Commissioner will have to be rid of these duties. Secondly, the Deputy Commissioner is supposed to accompany every Minister, who goes to tour that District. There are about 14 Ministers and I am not sure whether the Deputy Commissioner is supposed to accompany the Deputy Ministers also ; God forbid it. As it is with 14 Ministers touring about 19 Districts, considerable Government work is dislocated. I know, many a time, we as Members of the Legislative Assembly are entitled to get the programme of the Deputy Commissioner every month and every month I find that the Deputy Commissioner is out of Headquarters most of the time. I have known the plight of Lawyers. There are many revenue matters and excise matters which will have to be decided upon by the Collector or the Deputy Commissioner, but the Deputy Commissioner has been unable, under the present frame-work and under the existing state of affairs, to effectively function as the head of the District. This will have to be borne in mind by the Government.

Sir, I will also make a reference to the Community Development Project and the large publicised National Extension Service. I have been watching the progress made under these two heads. There was a time when we thought that this Community Development Project would certainly give a sort of a uplifting at least in the Rural areas. But, after seeing this work for a few years we are disillusioned. The very fact that to increase agricultural production the Package Scheme has been introduced is by itself has a tacit admission that the

(SRI S. M. KRISHNA)

Community Development Project and the National Extension Service Scheme, have been a big failure. One of the principal aims of the National Extension Service was and still is to increase agricultural production to encourage the ryots to take up intensive methods of cultivation. If that was the purpose, I do not see any reason why the Government of India or the Government of Mysore should start in terms of bringing in a fresh Scheme known as the Package Deal or the Package Plan. So, Sir, there is considerable lack of co-ordination in some of these developmental projects. Specially in the way the National Extension Service Blocks are functioning in our State and where some of these Taluk Boards have been functioning, there has been considerable contradiction; there has been considerable overlapping. So, I think the Government may go to the extent of suggesting appointment of a small body of Experts to recommend ways and means of trying to co-ordinate various developmental works started under the Community Development Programme, under the National Extension Service and under the Package Plan. We are sure that if the Package Plan in Mandya is going to be a success, which I doubt under the existing state of affairs, it is quite probable that this idea of extending this Package Programme to other Districts also will be considered. So before we go to the extent of extending this programme to every District, I would make a very earnest appeal to the Government to constitute a very small Committee consisting of experts to go into the working of National Extension Service and the Community Project and the Package Plan. With these few observations, I would, by and large, support and welcome the various measures of economy suggested in the report of the Mysore Resources and Economy Committee. I only wish that the Government at least would be bold enough—would be true enough—to act to implement at least the bulk of the recommendations made in this Report. I only hope that this will not follow various other reports that were given in the State like the Gorwala Report and the Finance Enquiry Committee Report, in 1956. With this fervent hope, I finish my observations, Sir.

†ಶ್ರೀ ಕೆ. ಪಿ. ಗದಗ್ (ಗದಗ್).—ಅಧ್ಯಕ್ಷರೇ, ಈ ಪ್ರಾಂತ್ಯದಲ್ಲಿ ಉಳಿತಾಯ ಮತ್ತು ಆದಾಯವನ್ನು ಹೆಚ್ಚಿಸುವ ಬಗ್ಗೆ ಸಲಹೆ ಮಾಡಿರುವ ಈ ರಿಪೋರ್ಟಿಗೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ಉಳಿತಾಯ ಮಾಡುವುದು ಮತ್ತು ಕರಗಳನ್ನು ಹೆಚ್ಚಿಸುವುದು ಎರಡೂ ಈಗ ನಾವು ಕೈಕೊಂಡಿರುವ ಪಂಚವಾರ್ಷಿಕ ಯೋಜನೆಯನ್ನು ಪೂರೈಸುವುದಕ್ಕೆ ಅತ್ಯಾವಶ್ಯಕ ವಾಗಿದೆ.

ಈ ಸಂದರ್ಭದಲ್ಲಿ ಇದುವರೆಗೆ ನಡೆಸಿರುವ ಪಂಚ ವಾರ್ಷಿಕ ಯೋಜನೆಗಳ ಫಲಿತಾಂಶವೇನೆಂಬುದನ್ನು ನಾವು ಪರಿಶೀಲಿಸಿ ವಿಷಯ ಮಥನ ಮಾಡುವುದು ಅವಶ್ಯಕ. ಈ ಎರಡು ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ನಮ್ಮ ದೇಶದಲ್ಲಿ ಅನೇಕ ಕೆಲಸ ಕಾರ್ಯಗಳು ಕೈಕೊಳ್ಳಲ್ಪಟ್ಟಿವೆ. ಅನೇಕ ನಿರಾವರಿ ಅಭಿವೃದ್ಧಿ ಕಾರ್ಯಗಳು, ವಿದ್ಯುಚ್ಛಕ್ತಿಯ ಬೆಳೆವಣಿಗೆ, ವ್ಯವ ಸಾಯದ ಮುನ್ನಡೆ, ವಿದ್ಯಾಭ್ಯಾಸದ ಪ್ರಗತಿ, ಹೊಸ ಹೊಸ ರಸ್ತೆಗಳ ನಿರ್ಮಾಣ, ಆಸ್ಪತ್ರೆಗಳ ಏರ್ಪಾಡು ಈ ರೀತಿ ಅನೇಕಾನೇಕ ಕಾರ್ಯಗಳು ಈ ಪ್ರಾಂತ್ಯದಲ್ಲಿ ನಡೆದು ಬಹಳ ಮಟ್ಟಿಗೆ ನಮ್ಮ ದೇಶ ಪ್ರಗತಿ ಯಾಗಿದೆಯೆಂಬದರಲ್ಲಿ ಎರಡು ಅಭಿಪ್ರಾಯ ಅಥವಾ ಭಿನ್ನಾಭಿಪ್ರಾಯವಿಲ್ಲ. ಆದರೆ, ಈ ಎರಡು ಪಂಚ ವಾರ್ಷಿಕ ಯೋಜನೆಗಳ ಮತ್ತು ತೃತೀಯ ಯೋಜ ನೆಯ ಮೊದಲನೆಯ ವರ್ಷದ ಒಟ್ಟು ಫಲಿತಾಂಶ ವೇನೆಂಬುದನ್ನು ನಾವೀಗ ಪರಿಶೀಲಿಸುವುದಾದರೆ, ಇವುಗಳಿಂದಾಗಿ ನಮ್ಮ ಇಂಡಿಯಾ ದೇಶದ ರಾಷ್ಟ್ರೀಯ income ಶೇಕಡ 42 ರಷ್ಟು ಹೆಚ್ಚಾಗಿದೆಯೆಂದು ಗೊತ್ತಾಗುತ್ತದೆ. ಈ ರಿಪೋರ್ಟಿನಲ್ಲಿಯೂ ಹೇಳಿದೆ. ನಮ್ಮ ಪ್ರಾಂತ್ಯದಲ್ಲಿ ಶೇಕಡ 31 ರಷ್ಟು National Income ಜಾಸ್ತಿಯಾಗಿದೆಯೆಂದು ಒಪ್ಪಿಕೊಳ್ಳ ಬಹುದು. ಇಷ್ಟನ್ನು ತಿಳಿದು ನಾವು ತೃಪ್ತಿಪಟ್ಟು ಕೊಳ್ಳುವ ಹಾಗಿಲ್ಲ. ಇರುವ ಮುಖ್ಯಾಂಶವೆಂದರೆ, ಈ ನ್ಯಾಷನಲ್ ಇನ್‌ಕಂ ಎಂಬುದು ಯಾವ ಪ್ರಕಾರ ವಿತರಣೆಯಾಗಿದೆ, ಜನ ಸಾಮಾನ್ಯರಿಗೆ ಎಷ್ಟರಮಟ್ಟಿಗೆ ಉಪಯುಕ್ತತೆಗೆ ಕಾರಣವಾಗಿದೆಯೆಂಬದನ್ನು ಪರಿ ಶೀಲಿಸುವುದು. ಹಾಗೆ ನೋಡುವಲ್ಲಿ, ಇದು ಬಹು ಮಟ್ಟಿಗೆ ಯಾರು ಶ್ರೀಮಂತರಾಗಿದ್ದರೋ, ಯಾರು ದೊಡ್ಡ ದೊಡ್ಡ ವ್ಯವಹಾರ ಮಾಡುತ್ತಿದ್ದರೋ, ಯಾರಿಗೆ ಹೆಚ್ಚಿನ ಭೂಮಿ ಕಾಣಿಗಳಿದ್ದುವೋ ಅವರಿಗೆ ಇನ್ನಷ್ಟು ಅನುಕೂಲವಾಗಿದೆಯೆನ್ನಬಹುದು. ಬಹುಶಃ ಸರ್ಕಾರದವರು ಮಾಡಿರುವ ಕೈಗಾರಿಕೋದ್ಯಮ ಗಳಿಂದ ನಮಗೆ ಸ್ವಲ್ಪ ಹೆಚ್ಚಿನ ಉತ್ಪತ್ತಿ ಲಭಿಸಿದೆ ಯಾದ್ದರಿಂದ National Income ಜಾಸ್ತಿಯಾಗಿದೆ ಯೆನ್ನಬಹುದು. ಆದ್ದರಿಂದ ವಾಸ್ತವವಾಗಿ ಜನ ಸಾಮಾನ್ಯರಿಗೆ ಇದರ ವಿತರಣೆಯಾಗಿ, ಏನು ಜನ ಸಾಮಾನ್ಯರ ಆದಾಯ ಬೆಳೆಯಬೇಕೆಂದು ಕೇಂದ್ರ ಸರ್ಕಾರದವರೂ ಪ್ರಾಂತ ಸರ್ಕಾರಗಳೂ ಅಪೇಕ್ಷಿಸು ತ್ತಿವೆಯೋ ಅವರಿಗೆ ಅಷ್ಟೊಂದು ಅನುಕೂಲವಾಗಿಲ್ಲ ವೆಂದು ಹೇಳಿದರೆ ಅದರಲ್ಲೇನೂ ಭಿನ್ನಾಭಿಪ್ರಾಯವಿಲ್ಲ ವೆನ್ನ ಬಹುದು.

4-00 P.M.

ಪ್ಲಾನಿಂಗ್ ಕಮಿಷನ್ನಿನವರೂ ಕೆಲಮಟ್ಟಿಗೆ inequitable Distribution ನಿನ್ನ ಬಗ್ಗೆ ಗಮನ ಕೊಡಬೇಕೆಂದು ಹೇಳಿದ್ದಾರೆ ಎಂದು ಈ ಕಮಿಟಿ ರಿಪೋರ್ಟಿನಲ್ಲಿಯೂ ಇದೆ. ನಾನೂ ಕೂಡ ಬಹು ಮಟ್ಟಿಗೆ inequitable distribution ಆಗಿದೆ ಎಂದು ಅಭಿಪ್ರಾಯ ಪಡುತ್ತೇನೆ. ಆದರೆ ಇದರಂತೆ ನಮ್ಮ ದೇಶದ ಯೋಜನೆಗಳಿಂದ ಬಹುಮಟ್ಟಿಗೆ ಸರಿಯಾದ ಈಕ್ವಲ್ ಡಿಸ್ಟ್ರಿಬ್ಯೂಷನ್ನು ಆಗುವುದಕ್ಕೆ ಸಾಧ್ಯವೂ ಇಲ್ಲ. ಆದುದರಿಂದ ಈಗ ಹಾಕಿಕೊಂಡ ಯೋಜನೆಯಿಂದ ನಮ್ಮ ಜನಕ್ಕೆ ಸಾಕಷ್ಟು ಫಲವೂ ಇಲ್ಲ. ನಿಜವಾಗಿ ನಮ್ಮ ಜನ ಎಲ್ಲಿ ಬಳಲುತ್ತಿದ್ದಾರೆ, ಎಲ್ಲಿ ತೊಂದರೆ ಪಡುತ್ತಿದ್ದಾರೆ ಅದನ್ನು ಮೊದಲು ವಿಚಾರ ಮಾಡಬೇಕಾಗಿದೆ. ನಾನು ಹೇಳುವುದು ಇಷ್ಟು. ಹಳ್ಳಿಯ ಜನರು ವ್ಯವಸಾಯದ ಉದ್ಯಮದಲ್ಲಿರುವವರು, ವರ್ಷದಲ್ಲಿ ಐದು-ಆರು ತಿಂಗಳುಗಳ ಕಾಲ ವ್ಯವಸಾಯವಿಲ್ಲದೆ ಇರುತ್ತಾರೆ. ಅಂತಹವರಿಗೆ ಬೇರೆ ಉದ್ಯಮಗಳು ಇಲ್ಲ. ಅಂತಹವರಿಗೆ ಬೇರೆ ಉದ್ಯಮಗಳನ್ನು ಪೂರೈಸಿದ್ದರೆ, ನಿಜವಾಗಿಯೂ ನಮ್ಮ ದೇಶ ಪ್ರಗತಿ ಹೊಂದಲು ಸಾಧ್ಯವಿಲ್ಲ. ಈ ಕೃಷಿ ಮಾಡುವ ಜನರೇ ಸುಮಾರು ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚಿಗೆ ಇರುವುದರಿಂದ, ಹಳ್ಳಿಗಳಲ್ಲಿ "Traditional industries" ಎಂದು ಹೇಳುವಂತಹ ಕೈಗಾರಿಕೋದ್ಯಮಗಳು ಬೆಳೆಯಲು ಅವಕಾಶ ಮಾಡಬೇಕು. ಒಂದಲ್ಲ ಒಂದು ಕಾಲದಿಂದ ಇಂತಹ ಉದ್ಯಮಗಳು ಬೆಳೆದು ಬಂದಿದ್ದವು. ಈಗ ಇಂತಹ ಉದ್ಯಮಗಳನ್ನು ಮುಂದಕ್ಕೆ ತರುವುದು ಅಸಾಧ್ಯವೇನಲ್ಲ. ಈ ಹಳ್ಳಿಯ ಜನಕ್ಕೆ ಪ್ರೋತ್ಸಾಹ ಕೊಡುವಂತಹ ಯೋಜನೆಗಳನ್ನು ಸರಕಾರ ಕೈಗೊಳ್ಳಬೇಕು. ಹಳ್ಳಿಗಳಲ್ಲಿ ಏನು ಟ್ರೆಡಿಷನಲ್ ಇಂಡಸ್ಟ್ರೀಗಳಿವೆ. ಅವನ್ನು ಪ್ರಗತಿದಾಯಕವಾಗಿ ಮಾಡಲು, ಉತ್ತೇಜನ ಕೊಡಲು ನಮ್ಮ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಅಷ್ಟಾಗಿ ಏನೂ ಆಗಿಲ್ಲ. ಅದಕ್ಕಾಗಿ ನಾನು ಇಂತಹ ಇಂಡಸ್ಟ್ರೀಗಳನ್ನು ಮಾಡುವುದು ಅತ್ಯವಶ್ಯಕ ಎಂದು ಹೇಳಬಯಸುತ್ತೇನೆ. ಇದರಿಂದ ಹಳ್ಳಿಗಳಲ್ಲಿರುವ ಜನಸಂಖ್ಯೆಯನ್ನು ನೋಡಿಕೊಂಡು ಈ ಉದ್ಯಮಗಳನ್ನು ಸ್ಥಾಪಿಸುವುದು ಅಸಾಧ್ಯವೇನಲ್ಲ. ಅನೇಕ ಜನ ಈಗಲೂ ಹಳ್ಳಿಗಳಲ್ಲಿ ಹಿಂದಿನಿಂದ ಬಂದ ಕೆಲ್ಲವು ವೃತ್ತಿಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ನಮ್ಮಲ್ಲಿರುವ ಇಂಡಸ್ಟ್ರಿ ಶಾಖೆಯ ಅಧಿಕಾರಿಗಳು ಏನಿದ್ದಾರೆ, ಅವರು ಕೋ-ಅಪರೇಟೀವ್ ಬೇಸಿಸ್ಸಿನ ಮೇಲೆ ಮಾಡಿ ಎಂದು ಈ ಹಳ್ಳಿಗಳ ಜನರಿಗೆ ಹೇಳಿದರೆ ಅವರಿಗೆ ಸರಿಯಾದ ಯೋಜನೆಯೇ ಇರುವುದಿಲ್ಲ. ಮತ್ತು ಹೆಚ್ಚಿನ ಆಸಕ್ತಿಯೂ ಇರುವುದಿಲ್ಲ. ಅಧಿಕಾರಿಗಳು ಬರೀ ಪಟ್ಟಣಗಳಲ್ಲೇ ಗಮನ ಕೊಡುವದರ ಬದಲಾಗಿ, ಹಳ್ಳಿಗಳಿಗೆ ಹೋಗಿ ಯಾವ ಯಾವ ಉದ್ಯಮಗಳಿವೆ ಎಂದರೆ Traditional industries ಗಳಿವೆ ಎನ್ನುವುದನ್ನು ನೋಡಿಕೊಂಡು ಅವನ್ನು ಪುನರುಜ್ಜೀವನ ಗೊಳಿಸಲು ಏನು ಸಾಧನ ಸಲಕರಣೆಗಳು ಬೇಕು ಎನ್ನುವುದರ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಇಂತಹ ಉದ್ಯಮಗಳನ್ನು ಪೂರೈಸಲು ಅವರಿಗೆ ಹಣ ಕೊಟ್ಟು ಸಹಾಯ ಮಾಡಿದರೆ ಹಳ್ಳಿಗಳಲ್ಲಿ ಈ ಉದ್ಯಮಗಳು ಬೆಳೆಯಲು ಸಹಾಯವಾಗುತ್ತವೆ ಮತ್ತು ಇಲ್ಲಿನ ಜನಕ್ಕೆ ಉಪಯುಕ್ತವಾಗುವಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈಗ ಅಂತಹ ಯೋಜನೆಯನ್ನೇನೂ ಮಾಡಿಲ್ಲ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ನಮ್ಮಲ್ಲಿಯೂ ಇಂತಹ ಕೈಗಾರಿಕೋದ್ಯಮಗಳನ್ನು ಮಾಡಲು ತಕ್ಕ ಪ್ರಯತ್ನ ಮಾಡಬೇಕೆಂದು ನಾನು ಸರಕಾರವನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಒಂದು ವಿಚಾರವನ್ನು ಈ ಕಮಿಟಿಯವರು ಸಲಹೆ ಮಾಡಿದ್ದಾರೆ. ಅವರು ಸೆಕ್ರೆಟೇರಿಯಟ್ಟಿನಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ, ಪ್ರತಿಯೊಂದು ಡಿವಿಜನ್ನಿನಲ್ಲಿ ಮತ್ತು ಅನೇಕ ಇಲಾಖೆಗಳಲ್ಲಿ ಕೆಲಕೆಲವು ಕ್ಲಾರ್ಕುಗಳಂತಹ ಜನ ಹೆಚ್ಚು, ಇವರನ್ನು ಕಡಮೆ ಮಾಡಲಿಕ್ಕೆ ಅವಕಾಶವಿದೆ; ಆ ಪ್ರಕಾರ ಕೆಲವು ಇಲಾಖೆಗಳಲ್ಲಿ ಕೆಲವು ಜನರ ಸಂಖ್ಯೆ ಹೆಚ್ಚಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಈ ಬಗ್ಗೆ ನಾನು ಹೇಳುವುದಿಷ್ಟೇ. ತೆಗೆಯುವಾಗ ಯಾವುದೇ ಖಾತೆಯಾಗಲೀ, ಅಲ್ಲಿನ ಕೆಲಸಕ್ಕೆ ಅನಾನುಕೂಲವಾಗದಂತೆ ಅಲ್ಲಿನ ಸಿಬ್ಬಂದಿಯ ಅಗತ್ಯವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಕಡಿಮೆ ಮಾಡಲಿಕ್ಕೆ ಅವಶ್ಯಕತೆ ಇದೆ ಎಂದು ನಮಗೇನೂ ತಿಳಿಯುವುದಿಲ್ಲ. ಏಕೆಂದರೆ, ಆಯಾ ಖಾತೆಯ ಸೆಕ್ರೆಟರಿಯಾಗಲೀ, ಆಯಾ ಖಾತೆಯ ಮಿನಿಸ್ಟರಾಗಲೀ, ಅವರ ಅಭಿಪ್ರಾಯವನ್ನು ತೆಗೆದುಕೊಂಡು ಯಾವುದಾದರೂ ಇಲಾಖೆಯಲ್ಲಿ ಜಾಗಗಳು ಹೆಚ್ಚಾಗಿದ್ದರೆ. ಅಂತಹ ಜಾಗಗಳನ್ನು ಕಡಮೆ ಮಾಡಬಹುದು. ಇದೇ ಸಂದರ್ಭದಲ್ಲಿ ಇನ್ನೊಂದು ನಾವು ಕೇಳುತ್ತಿರುವುದು Files Move ಆಗುವುದಿಲ್ಲ ಎಂದು. Papers Move ಆಗುವುದಿಲ್ಲ ಎಂದರೆ ಅದರ ಸಲುವಾಗಿ ಸ್ಟಾಫ್ ಕಡಮೆ ಮಾಡಬೇಕು ಎಂದು ಹೇಳಿದರೆ, ಅದು ಸರಿಯಾಗಿರುವುದಿಲ್ಲ. ಪೇಪರುಗಳು ಸರಿಯಾಗಿ ಒಂದು ಜಾಗದಿಂದ ಮತ್ತೊಂದೆ ಡೆಗೆ ಏಕೆ ಹೋಗುವುದಿಲ್ಲ ಎನ್ನುವುದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಅಗತ್ಯ. ಟೆಕ್ನಿಕಲ್ ಪೋಸ್ಟುಗಳನ್ನು ಕಡಮೆ ಮಾಡುವಾಗ ಕೆಲಸ ಯಾವುದೇ ರೀತಿಯಲ್ಲಿ Suffer ಆಗದಂತೆ, ಅನಾನುಕೂಲವಾಗದಂತೆ, ಅಂತಹ ಜಾಗಗಳು ಹೆಚ್ಚಾಗಿದ್ದರೆ, ಅವುಗಳನ್ನು ಕಡಿಮೆ ಮಾಡಲಿಕ್ಕೆ ಆಯಾ ಖಾತೆಯ ಸೆಕ್ರೆಟರಿಗಳ ಮತ್ತು ಆಯಾ ಖಾತೆಯ ಮಿನಿಸ್ಟರುಗಳಲ್ಲಿ ವಿಚಾರ ಮಾಡಿ ಅವರ ಸಲಹೆಗಳನ್ನು ತೆಗೆದುಕೊಂಡು ಕಡಿಮೆ ಮಾಡಲಿಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಅವಶ್ಯಕ. ಎಕಾನಮಿ ಕಮಿಟಿ ರಿಪೋರ್ಟಿನವರು ಕೊಟ್ಟಿರುವ ಸಲಹೆ ಬಗ್ಗೆ ಸರಕಾರ ಲಕ್ಷ್ಯವಿಟ್ಟು ವಿಚಾರಿಸಬೇಕು ಎಂದು ಈ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಎಂದರೆ ಸರ್ವಿಸಸ್‌ಗಳಿಗಾಗಿ ರೆಕ್ರೂಟ್‌ಮೆಂಟ್ ಮಾಡುವಾಗ Competitive Examinations ಮೂಲಕ ತೆಗೆದುಕೊಳ್ಳಬೇಕೆಂದು ಒಂದು ಸಲಹೆ ಇದೆ, ಇದು ನಿಜವಾಗಿಯೂ ಒಂದು ರೀತಿಯ ತಾತ್ವಿಕವಾದ ವಿಚಾರ ಮತ್ತು ಸರಿಯಾದುದು. ಎಷ್ಟೋ ಸಂದರ್ಭಗಳಲ್ಲಿ ಈಗ ಕೆಲಸಗಳಿಗಾಗಿ ಕ್ಯಾಂಡಿಡೇಟುಗಳನ್ನು ತೆಗೆದುಕೊಳ್ಳುತ್ತಾರೆ. ಇವರಿಗೆಲ್ಲಾ ಟ್ರೈನಿಂಗು ಕೊಡಲು ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟನ್ನು ಪ್ರತಿಯೊಂದು ಜಿಲ್ಲೆಯಲ್ಲಾಗಲೀ, ಪ್ರತಿಯೊಂದು ಡಿವಿಜನ್ನಿನಲ್ಲಾಗಲೀ, ಇರುವಂತೆ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಇದು ಬಹಳ ಅತ್ಯಾವಶ್ಯಕವಾದ ಸಲಹೆ ಎಂದು ನಾನು ಹೇಳುತ್ತೇನೆ. ಏಕೆಂದರೆ, ಇತ್ತೀಚೆಗೆ ಕ್ಯಾಂಡಿಡೇಟುಗಳು ಏನು ಬರುತ್ತಿದ್ದಾರೆ, ಪ್ರತಿಯೊಂದು ಇಲಾಖೆಯಲ್ಲಿಯೂ ಬಹಳ ಮಂದಿ ಅನುಭವವಿಲ್ಲದವರು, ವಿಷಯ ಗೊತ್ತಿಲ್ಲದವರು, ಹೀಗೆ ಅನೇಕ ಕ್ಯಾಂಡಿ

(ಶ್ರೀ ಕೆ. ಪಿ. ಗದಗ್)

ಡೇಟುಗಳಿದ್ದಾರೆ. ಇದರಲ್ಲೇನೂ ಅತಿಶಯೋಕ್ತಿಯಿಲ್ಲ. ದೇಶದಲ್ಲಿ administration ಸಹ suffer ಆಗಲಿಕ್ಕೆ ರೆಕ್ರೂಟ್‌ಮೆಂಟ್ ಮಾಡುವಾಗ ಸರಿಯಾದ ಟ್ರೈನಿಂಗು ಇಲ್ಲದೆ ಇರುವುದು, ಟ್ರೈನಿಂಗು ಆದಮೇಲೆ ಅವರನ್ನು ನೇಮಕ ಮಾಡಿದರೆ, ಕೆಲಸ ಚೆನ್ನಾಗಿ ನಡೆಯುತ್ತದೆ. ಅಲ್ಲದೆ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹದುರಲ್ಲಿ aptitude ಇದೆಯೇ, ಇಲ್ಲವೇ ಎನ್ನುವುದನ್ನು ನೋಡಿಕೊಂಡು ಆ ಜಾಗದಲ್ಲಿ confirm ಮಾಡುತ್ತೇವೆ. ಇಲ್ಲವಾದರೆ ಇಲ್ಲ ಎನ್ನುವಂತೆ ಮಾಡತಕ್ಕದ್ದು ಉತ್ತಮ ಮತ್ತು ಆ ರೀತಿ ಕಾರ್ಯಗತ ಮಾಡಲಿಕ್ಕೆ ತಕ್ಕ ಕ್ರಮವನ್ನು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ವಿಚಾರಗಳನ್ನು ಈ ಕಮಿಟಿಯವರು ಹೇಳಿರುವುದರ ಬಗೆಗೆ ನಾವು ವಿಚಾರ ಮಾಡಬೇಕಾಗಿದೆ. ಇವುಗಳಲ್ಲಿ ಹೆಚ್ಚು ಪ್ರಮುಖ್ಯವಾದ ವಿಷಯಗಳು, ಎಂದರೆ, Mysore Iron and Steel Corporation, Road Transport Corporation ಮತ್ತು Electricity Board Corporation ಎಂದು ಈ ಪ್ರಕಾರ ಕೆಲವು ಕಾರ್ಪೊರೇಷನುಗಳನ್ನು ಮಾಡಿದ್ದಾರೆ. ಇದು ಅವಶ್ಯವಾದುದು. ಇಂತಹ ಅನೇಕ ಸಂಸ್ಥೆಗಳನ್ನು ಕಾರ್ಪೊರೇಷನ್ನು ಎಂದು ಮಾಡಿರುವುದರಿಂದ, ಒಂದು ರೀತಿಯಿಂದ ಮಾಡಿದ ಉದ್ದೇಶ ನಾನು ತಿಳಿದಮಟ್ಟಿಗೆ ಕೆಲಸ ದಕ್ಷತೆಯಿಂದ ಮತ್ತು ತ್ವರಿತದಿಂದ ನಡೆಯುತ್ತದೆ ಎಂದು. ಈ ಎಕಾನಮಿ ಕಮಿಟಿಯವರು ಸಹ ಹೇಳಿರುವಂತೆ ಇದರಲ್ಲಿ ಒಂದು ತತ್ವವಿದೆ. ಕೆಲಸ ಬಹಳ ದಕ್ಷತೆಯಿಂದ ಜವಾಬದಾರಿಯಿಂದ ಅವರು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು. ಇದರಲ್ಲಿ ಏನಾಗಿದೆ ಎಂದರೆ ಕಾರ್ಪೊರೇಷನ್ನು ಎಂದು ಪರಿವರ್ತಿಸಲಾದ ಸಂಸ್ಥೆಗಳು ತಮ್ಮ ಉತ್ಪನ್ನದಿಂದ ಶೇಕಡಾ ಐವತ್ತರಷ್ಟು ಇನ್‌ಕಂ-ಟ್ಯಾಕ್ಸು ಕೊಡಬೇಕಾಗಿದೆ.

50 ಪರ್ಸೆಂಟ್ ಇಕಂಟ್ಯಾಕ್ಸ್ ಕೊಡುವುದಕ್ಕಿಂತ ಇಲ್ಲಿ ಅವರೇನು ಸಲಹೆ ಮಾಡಿದ್ದಾರೆಯೋ ಅದನ್ನು ವಿಚಾರ ಮಾಡುವಂಥಾದ್ದು ಇದೆ. ಅಲ್ಲಿಗೆ ಜನರಲ್ ಮ್ಯಾನೇಜರೊಬ್ಬರನ್ನು ನೇಮಿಸಿ ಅವರಿಗೆ ಕೆಲವು ಪವರ್ಸ್ ಕೊಟ್ಟು ದಕ್ಷತೆಯಿಂದ ಆಗಿಂದಾಗ್ಯೆ ಕೆಲಸ ಮಾಡಲಿಕ್ಕೆ ಬರುವಂಥಾ ಅವಕಾಶವಿದೆ. ಸಂದರ್ಭ ಇದೆ. ಆಡಿಟ್ ಆಗಬೇಕಾದರೆ ಕಮರ್ಷಿಯಲ್ ಸಿಸ್ಟಂ ಆಡಿಟ್ ಮಾಡಿದರೆ ಚೆನ್ನಾಗಿ ನಡೆಯುತ್ತದೆಂದು ಸಲಹೆ ಮಾಡಿದ್ದಾರೆ. ಅದು ಕೆಲಮಟ್ಟಿಗೆ ವಿಚಾರ ಮಾಡುವುದು ಇದೆ. ಮುಂದೆ ಇದನ್ನು ಕಾರ್ಪೊರೇಷನ್ ಮಾಡುವುದು ಸೂಕ್ತ ಅಲ್ಲವೇ ಹೇಗೆ ಎಂಬುದನ್ನು ವಿಚಾರ ಮಾಡಬೇಕು. ನಮಗೆ ಉಳಿತಾಯ ಬೇಕಾಗಿದೆ.

ಇನ್ನು ಅನೇಕ ಕೈಗಾರಿಕೆಗಳಿಗೆ ನಮ್ಮ ಸರ್ಕಾರದವರು ಬಹಳ ಹಣವನ್ನು ಇನ್‌ವೆಸ್ಟ್ ಮಾಡಿದ್ದಾರೆ. ಆ ಕೈಗಾರಿಕೆಗಳವರು ಇಂಟರೆಸ್ಟ್ ಅನ್ನು ಕೊಡುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಅವರು ಇಂಟರೆಸ್ಟ್ ಕೊಡುವುವಾದರೆ ಯಾವ ಪ್ರಕಾರ ಕೊಡುತ್ತಾರೆಂಬುದನ್ನು ವಿಚಾರ ಮಾಡಬೇಕಾಗಿದೆ. ನನಗೆ ತಿಳಿದಮಟ್ಟಿಗೆ ಕೆಲವರು ಕೊಡುತ್ತಾರೆ ಕೆಲವರು ಕೊಡುವುದಿಲ್ಲವೆಂದು ಹೇಳುತ್ತಾರೆ. ಕೇಂದ್ರದಲ್ಲಿ ರೈಲ್ವೆಯವರು ತಮ್ಮ ಆದಾಯದ ಕೆಲವು ಭಾಗವನ್ನು ಯಾವ ಪ್ರಕಾರ ರೆವಿನ್ಯೂ ಕೊಡುತ್ತಾರೆಯೋ ಹಾಗೆ ಕಾರ್ಪೊರೇಷನ್ ಆಗಲೀ, ಯಾರೇ ಆಗಲೀ ಕೈಗಾರಿಕೆಗಳಿಗೆ ಏನೇನು ಇನ್‌ವೆಸ್ಟ್ ಮಾಡಿದ್ದಾರೆ, ಏನು ಹಣ ಸರ್ಕಾರಕ್ಕೆ ಬರತಕ್ಕದ್ದು ಇದೆ, ಕನಿಷ್ಠ ಪಕ್ಷ ಇಂಟರೆಸ್ಟ್ ಆಗಲೀ ಅದು ಬರುವಂತೆ ಏರ್ಪಾಡು ಮಾಡಬೇಕು. ಈಗ ಕೇಂದ್ರ ಸರ್ಕಾರದವರೂ ಸಹ ಅನೇಕ ಹಣವನ್ನು ಕೈಗಾರಿಕೆಗಳ ಮೇಲೆ ಇನ್‌ವೆಸ್ಟ್ ಮಾಡಿದ್ದಾರೆ. ಅದರಿಂದ ಅವರಿಗೆ ಡಿವಿಡೆಂಡ್ ಬರುತ್ತದೆ. ಒಮ್ಮೆ ಈ ಕೈಗಾರಿಕೆಗಳ ವಿಷಯದಲ್ಲಿ ಚರ್ಚೆಯಾದ ಕಾಲಕ್ಕೆ ಒಬ್ಬ ಮಾನ್ಯ ಸದಸ್ಯರು ಏನು ಅಭಿಪ್ರಾಯಪಟ್ಟಿದ್ದಾರೆಂದರೆ ಸರ್ಕಾರದವರು ದುಡ್ಡನ್ನು ಇನ್‌ವೆಸ್ಟ್ ಮಾಡಿರತಕ್ಕ ಕೈಗಾರಿಕೆಗಳಿಂದ ಇದುವರೆಗೂ ಡಿವಿಡೆಂಡ್ ಬಂದಿಲ್ಲ ಎಂದರೆ ಇದರ ಅರ್ಥ ಏನು? ಇದು ಹೇಗೆ ಎಂಬುದು ತಿಳಿಯುವುದಿಲ್ಲ ಎಂದು ಹೇಳಿದ್ದಾರೆ. ಈ ಕೈಗಾರಿಕೆಗಳಲ್ಲಿ ಬಹಳ ಉತ್ಪನ್ನ ಬರುತ್ತದೆ. ಈ ಕೈಗಾರಿಕೆಗಳ ಬೆಳವಣಿಗೆಗೆ ಹಣವನ್ನು ಹಾಕುತ್ತಾ ಇರಬಹುದು ಕೆಲವು ಮಹನೀಯರು ಸಲಹೆ ಕೊಟ್ಟಿದ್ದಾರೆ. ನಾನಾದರೂ ಕೂಡ ಅದೇ ಅಭಿಪ್ರಾಯಪಡುತ್ತೇನೆ. ಅದನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಲ ತೆಗೆದು ಮಾಡಬೇಕು, ನಮಗೆ ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ. ಈ ಮಾತು ಕೆಲಮಟ್ಟಿಗೆ ವಿಚಾರಿಸಬೇಕು. ಅದರಿಂದ ಆದಾಯವನ್ನು ಹೆಚ್ಚಿಸಬೇಕು. ಆದಾಯವನ್ನು ಹೆಚ್ಚಿಸಲು ಯಾವ ಸೋರ್ಸಸ್ ಇದೆ ಎನ್ನುವ ಸಂದರ್ಭದಲ್ಲಿ ಈ ಕೈಗಾರಿಕೆಗಳಿಂದ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು ಎನ್ನುವ ಸೂಚನೆಯನ್ನು ನಾನು ಹೇಳಬಯಸುತ್ತೇನೆ. ಮೈಸೂರು ಪ್ರಾಂತದಲ್ಲಿ ಕೇಂದ್ರ ಸರ್ಕಾರದವರು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಇದು ಅಭಿನಂದನೀಯವಾದದ್ದು. ಈ ಕೈಗಾರಿಕೆಗಳಲ್ಲಿ ಯಾವ ಪ್ರಕಾರ ಆದಾಯ ಇದೆ. ಇಂಥಾದ್ದಕ್ಕೆ ಆದಾಯ ಕಡಿಮೆ ಇದೆ ಅದನ್ನು ಹೆಚ್ಚಿಸಬೇಕು ಎಂದು ಅಂಕಿಸಂಖ್ಯೆಗಳನ್ನು ಅಧಿಕೃತವಾಗಿ ಹೇಳಬೇಕೆಂದರೆ ಅದು ಅಷ್ಟೊಂದು ಸುಲಭವಲ್ಲ. ಒಂದು ದಿವಸ ಕಾರ್ಖಾನೆಯನ್ನು ನೋಡಿದರೆ ಅದರ ವಿಚಾರಗಳೆಲ್ಲಾ ತಿಳಿಯುವುದಿಲ್ಲ, ಅದರ ಆಡಳಿತವನ್ನು ನೋಡಬೇಕು, ಆಡಳಿತದಲ್ಲಿ ಏನೇನು ಲೋಪದೋಷ ಇದೆ, ಎಲ್ಲಿ ಎಕಾನಮಿ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಪರಿಶೀಲಿಸಿ ನೋಡುವುದಕ್ಕೆ ಕೊಂಚ ಅವಧಿ ಹಿಡಿಯುತ್ತದೆ. ಅದಕ್ಕೆ ತಜ್ಞರೂ ಇರಬೇಕೆಂದು ಅಭಿಪ್ರಾಯಪಟ್ಟರೆ ಇರಬಹುದು ಎಂದು ನಾನು ಹೇಳುತ್ತೇನೆ. ಕೈಗಾರಿಕೆಗಳಲ್ಲಿ ಬಹಳ ಉತ್ಪನ್ನ ಇದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. 20-30, 60 ಪರ್ಸೆಂಟ್ ತನಕ ಅನೇಕ ಕೈಗಾರಿಕೆಗಳಲ್ಲಿ ಉತ್ಪನ್ನ ಇದೆ. ಆದರೆ ಕೆಲವು ಕೈಗಾರಿಕೆಗಳಲ್ಲಿ ಎಂದರೆ ಈಗ ಉದಾಹರಣೆಗೆ ಹೇಳುವುದಾದರೆ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿಯನ್ನೇ ತೆಗೆದುಕೊಂಡರೂ ಕೂಡ ಅದರಿಂದ ನಮ್ಮ ಸರ್ಕಾರಕ್ಕೆ ಇನ್ನೂ ಹೆಚ್ಚು ಉತ್ಪನ್ನ ಬರಬೇಕು ಎನಿಸುತ್ತದೆ, ಕೈಗಾರಿಕೆಗಳ ಉತ್ಪನ್ನ ಏನಿದೆ ಅದನ್ನು ಆದಷ್ಟು ಹೆಚ್ಚಿಸಿ ಸರ್ಕಾರಕ್ಕೆ ಹೆಚ್ಚು ಆದಾಯ ಬರುವಂತೆ ತಕ್ಕ ಉಪಾಯವನ್ನು, ಯೋಜನೆಯನ್ನು ಕೈಗೊಳ್ಳಬೇಕು ಎಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಸ್ಟೋರ್ಸ್ ಪರ್ಚೇಜ್ ಕಮಿಟಿ ಎಂದು ಒಂದು ಕಮಿಟಿ ಇದೆ. ಈಗ 1960-61ನೇ ಸಾಲಿನಲ್ಲಿ ಸುಮಾರು 7-8 ಕೋಟಿ ರೂಪಾಯಿಗಳ ವ್ಯವಹಾರ ಈ ಸ್ಟೋರ್ಸ್ ಪರ್ಚೇಜ್ ಕಮಿಟಿಯಲ್ಲಿ ನಡೆದಿದೆ.

ಇನ್ನು ಮುಂದೆ ಇನ್ನೂ ವ್ಯವಹಾರ ಹೆಚ್ಚಾಗುತ್ತದೆ. ಅದರ ಆಡಳಿತದಲ್ಲಿ ಕೆಲಮಟ್ಟಿಗೆ ಸರಿಮಾಡಬೇಕಾಗಿದೆ. ಸ್ಟೋರ್ಸ್ ಪರ್ಚೇಜ್ ಕಮಿಟಿಗೆ ಒಬ್ಬ ಹೋಲ್ ಟೈಮ್ ಡೈರೆಕ್ಟರನ್ನು ನೇಮಕ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಅದು ಅಗತಕ್ಕದ್ದು ಅವಶ್ಯ ಇದೆ. ನಾನೂ ಹಿಂದೆ ಸ್ಟೋರ್ಸ್ ಪರ್ಚೇಜ್ ಕಮಿಟಿಯ ಮೆಂಬರಾಗಿದ್ದೆ. ಆಗ ಕಮರ್ಷಿಯಲ್ ಟ್ಯಾಕ್ಸ್ ಕಮೀಷನರು ಸ್ಟೋರ್ಸ್ ಪರ್ಚೇಜ್ ಕಮಿಟಿಗೆ ಚೇರ್ಮನ್ ಆಗಿದ್ದರು. ಹಿಂದೆ ಆ ಕಮಿಟಿಗೆ 8-10 ಜನ ಮೆಂಬರುಗಳಿದ್ದರು. ಆಗ ಕೆಲಸ ಬಹಳ ಇತ್ತು. ಕೆಲಸ ಹೀಗೆಯೇ ನಡೆದರೆ ಏನು ಮಾಡಬೇಕು ಎಂದು ನಾನು ಕೇಳುತ್ತಿದ್ದೆ. ಈಗಲೂ ಕಮರ್ಷಿಯಲ್ ಟ್ಯಾಕ್ಸ್ ಕಮೀಷನರು ಸ್ಟೋರ್ಸ್ ಪರ್ಚೇಜ್ ಕಮಿಟಿಯ ಚೇರ್ಮನ್ ಆಗಿದ್ದಾರೋ ಏನೋ ಗೊತ್ತಿಲ್ಲ. ಅಂತೂ ಅಲ್ಲಿಗೆ ಒಬ್ಬ ಹೋಲ್ ಟೈಮ್ ಡೈರೆಕ್ಟರು ಅವಶ್ಯಕವಾಗಿ ಬೇಕು. 8 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವ್ಯವಹಾರವನ್ನು ಮಾಡುವಂಥಾ ಒಂದು ಕಮಿಟಿಗೆ ಒಬ್ಬ ಹೋಲ್ ಟೈಮ್ ಡೈರೆಕ್ಟರಿಲ್ಲ ಎಂದು ಹೇಳಿದರೆ "Pennywise pound foolish" ಎಂದಾಗುತ್ತದೆ. ಆದ್ದರಿಂದ ಅದಕ್ಕೆ ಒಬ್ಬ ಹೋಲ್‌ಟೈಮ್ ಡೈರೆಕ್ಟರ್ ಮಾಡುವುದು ಅವಶ್ಯಕ ಎಂದು ನಾನು ಈ ಮೂಲಕ ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಟೆಂಡರುಗಳನ್ನು ಕರೆಯುವಾಗ ಇವರು ಸ್ಪೆಸಿಫಿಕೇಷನ್ಸ್ ಎಂದು ಕೊಡುತ್ತಾರೆ. ಇವರು ಯಾವ ಸ್ಪೆಸಿಫಿಕೇಷನ್ ಕೊಡಬೇಕೆಂಬುದು ಇವರಿಗೆ ತಿಳಿಯದೆ ತಪ್ಪು ಸ್ಪೆಸಿಫಿಕೇಷನ್ ಕೊಡುವುದರಿಂದ ಟೆಂಡರ್ ಹಾಕುವವರಿಗೂ ತಿಳಿಯುವುದಿಲ್ಲ. ಇವರಿಗೂ ತಿಳಿಯುವುದಿಲ್ಲ. ಇಂಥಾ ಸಂದರ್ಭ ಅನೇಕ ಸಾರಿ ಬಂದಿದೆ ಎಂದು ಕೇಳಿದ್ದೇವೆ. ಸೆಂಟರ್‌ನವರು ಅನೇಕ ಆರ್ಟಿಕಲ್ಸ್ ಬಗ್ಗೆ ಸ್ಪೆಸಿಫಿಕೇಷನ್ಸ್ ಮಾಡಿ ಇಟ್ಟಿದ್ದಾರೆ, ಅಂಥಾ ಸ್ಪೆಸಿಫಿಕೇಷನ್ಸ್‌ಗಳನ್ನು ಅಲ್ಲಿಂದ ತರಿಸಿಕೊಂಡು ಯಾವುಯಾವುದು ಹೊಂದುತ್ತದೆಯೋ ಆ ಸ್ಪೆಸಿಫಿಕೇಷನ್ಸ್‌ಗಳನ್ನು ಇಲ್ಲಿಯೂ ನಿಗದಿಮಾಡಿ, ಆ ರೀತಿ ಮಾಡಲಿಕ್ಕೆ ಒಬ್ಬ ಲಯಸನ್ಸ್ ಆಫೀಸರ್ ನೇಮಕಮಾಡಿ, ಸೆಂಟ್ರಲ್ ಆರ್ಗನೈಜೇಷನ್ ರೇಟ್ಸ್ ಬಗ್ಗೆ, ಸ್ಪೆಸಿಫಿಕೇಷನ್ಸ್ ಬಗ್ಗೆ ಉಳಿದ ಪ್ರಾಂತಗಳಲ್ಲಿ ಯಾವ ಯಾವ ಪ್ರಕಾರ ಏನು ನಡೆದಿದೆ ಎಂಬುದನ್ನು ತಿಳಿದುಕೊಂಡು ಸ್ಟೋರ್ಸ್ ಪರ್ಚೇಜ್ ಕಮಿಟಿಯವರು ಕೆಲಸಗಳನ್ನು ಪೂರೈಸಿದರೆ ನಮಗೆ ಕೆಲಮಟ್ಟಿಗೆ ಲಾಭ ಆಗಬಹುದು. ಕೆಲಮಟ್ಟಿಗೆ ಉಳಿತಾಯವಾಗಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಟೆಂಡರ್‌ನಲ್ಲಿ ಸ್ಪೆಸಿಫಿಕೇಷನ್ಸ್ ಕೊಡುತ್ತಾರೆ, ಅದರಲ್ಲಿ ಇಂತಿಂಥಾ ಸ್ಪೆಸಿಫಿಕೇಷನ್ಸ್ ಆರ್ಟಿಕಲ್ಸ್‌ಗಳನ್ನು ಪೂರೈಸುವವರು ಇಂತಿಂಥಾ ರೇಟುಗಳನ್ನು ಇಂಥಾ ತಾರೀಖಿನೊಳಗೆ ಕೊಡಬೇಕು ಎಂದು ಹೇಳುತ್ತಾರೆ, ಇದರಲ್ಲಿ ಮಹತ್ವದ ವಿಷಯ ಏನೆಂದರೆ ಸ್ಪೆಸಿಫಿಕೇಷನ್ಸ್ ಪ್ರಕಾರ ಯಾವ ಟೆಂಡರು ಪಾಸಾಗಿರುತ್ತದೆಯೋ ಆ ಸ್ಪೆಸಿಫಿಕೇಷನ್ಸ್ ಪ್ರಕಾರ ಅವರು ಸಾಮಾನುಗಳನ್ನು ಪೂರೈಸುತ್ತಾರೆಯೋ ಇಲ್ಲವೋ ಎನ್ನುವುದನ್ನು ಪುನಃ ಚೆಕ್ ಅಥವಾ ಸೂಪರ್‌ವಿಜನ್ ಮಾಡಬೇಕು, ಆ ರೀತಿ ಮಾಡಿದರೆ ಆರ್ಟಿಕಲ್ಸ್ ಅನ್ನು ಅವರು ಸ್ಪೆಸಿಫಿಕೇಷನ್ ಪ್ರಕಾರ ಚೆಕ್ ಮಾಡುತ್ತಾರೆ, ಅದು ಸರಿಯಿಲ್ಲದಿದ್ದರೆ ಅದನ್ನು ತೆಗೆದುಕೊಳ್ಳುವುದಿಲ್ಲ. ಒಬ್ಬರ ಮೇಲೆ ಒಬ್ಬರು ಚೆಕ್ ಮಾಡುತ್ತಾ ಇದ್ದರೆ ಸ್ಪೆಸಿಫಿಕೇಷನ್ಸ್ ಪ್ರಕಾರವೇ ಆರ್ಟಿಕಲ್ಸ್‌ನ್ನು ಕೊಡುತ್ತಾರೆ, ಇಲ್ಲದಿದ್ದರೆ ಬಹಳ ಲುಕ್ಸಾನು ಆಗುತ್ತದೆ, ಸ್ಪೆಸಿಫಿಕೇಷನ್ಸ್ ತಪ್ಪುಕೊಟ್ಟಲ್ಲಿ ಅದರಿಂದ ಲುಕ್ಸಾನು ಆಗುತ್ತದೆ. ತಿಳಿದ ಸಂಗತಿಯನ್ನು ಇಷ್ಟು ಹೇಳುತ್ತೇನೆ, ಸ್ಪೆಸಿಫಿಕೇಷನ್ಸ್ ಪ್ರಕಾರ ಟೆಂಡರ್ಸ್ ಆಗುವಂತೆ ಒಂದು ಏರ್ಪಾಡು ಆಗಬೇಕು ಎಂದು ಈ ಮೂಲಕ ನಾನು ಹೇಳಬಯಸುತ್ತೇನೆ.

ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೆಚ್ಚು ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ ರಿಸೋರ್ಸಸ್ ಕಮಿಟಿಯವರು ಏನೊಂದು ಸಲಹೆ ಮಾಡಿದ್ದಾರೆ ಆ ಪ್ರಕಾರ ನಮ್ಮ ಮುಂದೆ ಬಿಲ್ಲೂ ಕೂಡ ಬಂದಿದೆ. ಶ್ರೀಮಾನ್ ಅಣ್ಣಾರಾಯರು ಮೊನ್ನೆ ಸಲಹೆ ಮಾಡಿದರು. ಅಲ್ಲದೆ ಹೊಸವಾಗಿ ಒಂದು ಸಲಹೆ ಮಾಡುತ್ತೇನೆ. ಈ ಸಲಹೆಯನ್ನು ಯಾರೂ ಇನ್ನೂ ಮಾಡಿಲ್ಲ. ಒಬ್ಬ ಮಿತ್ರರು ಒಂದು ಸಂಗತಿ ಹೇಳಿದರು. ಅವರು ಹೇಳಿದ್ದೇನೆಂದರೆ ಅಸೆಸಿಂಗ್ ಅಥಾರಟಿ ಏನು ಅಸೆಸ್ ಮಾಡುತ್ತಾರೆ ಅದು ಸರಿಯಾಗಿಲ್ಲದೇ ಅದರಲ್ಲಿ ಅನೇಕ ಭಾಗ, ಅನೇಕ ರಕಮು ಅಸೆಸೀಗೇ ಹೋಗುತ್ತವೆ ಎನ್ನುವ ಅಭಿಪ್ರಾಯ ವ್ಯಕ್ತ ಮಾಡಿದರು. ಅದು ನಿಜವಿರಲಿ, ಇಲ್ಲದೇ ಇರಲಿ, ಹೀಗಾಗದಂತೆ ಒಂದು ಯೋಜನೆ ಮಾಡಲಿಕ್ಕೆ ಬರುತ್ತದೆ ಎಂದು ನನ್ನ ಅಭಿಪ್ರಾಯ ತಿಳಿಸುತ್ತೇನೆ. ಇನ್‌ಕಂ ಟ್ಯಾಕ್ಸ್‌ನಲ್ಲಿ ಒಂದು ವ್ಯವಸ್ಥೆ ಇದೆ. ಏನು ಅಸೆಸ್ ಮಾಡುತ್ತಾರೆ ಅದನ್ನು ಪುನಃ ಇನ್‌ಸ್ಪೆಕ್ಟ್ ಮಾಡುವಂಥಾ ಒಬ್ಬ ಆಫಿಸರು ಇದ್ದಾರೆ. ಎಂದರೆ ಆಗ ಅಸೆಸಿಂಗ್ ಅಥಾರಟಿ ತಪ್ಪು ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಅಸೆಸ್ ಮಾಡಿದ್ದನ್ನು ಯಾರೂ ಇನಸ್ಪೆಕ್ಟ್ ಮಾಡುವುದಿಲ್ಲ ಎಂದರೆ ಫೇವರಿಟಿಸಿಂ ಮಾಡಲು ಅವಕಾಶವಾಗಬಹುದು. ಆದ್ದರಿಂದ ಇಲ್ಲೂ ಕೂಡ ಇನ್‌ಕಂ ಟ್ಯಾಕ್ಸ್‌ನಲ್ಲಿರುವಂತೆ ಇನ್‌ಸ್ಪೆಕ್ಟಿಂಗ್ ಆಫೀಸರ್ಸ್ ಅಂತ ಹೇಳಿ ಒಂದೊಂದು ಸರ್ಕಲ್‌ಗೆ 2-3 ಜನರನ್ನು ನೇಮಕ ಮಾಡಿದರೆ ಈ ಪ್ರಕಾರದ ಒಂದು ಆಕ್ಷೇಪಣೆ ಹೋಗುತ್ತದೆ. ಈ ಒಂದು ಯೋಜನೆಯನ್ನು ಸರ್ಕಾರದವರು ವಿಚಾರ ಮಾಡಬೇಕೆಂದು ಹೇಳಿ, ಶ್ರೀಮಾನ್ ರಾಮಚಂದ್ರರಾಯರ ಸಮಿತಿಯವರ ವರದಿಗೆ ನನ್ನ ಅಭಿವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಸಮಿತಿಯ ವರದಿಯನ್ನು ನಾವೀಗ ವಿಚಾರ ಮಾಡಿ ಸಲಹೆ ಕೊಡಬೇಕೆಂದು ಹೇಳಿ ಸರ್ಕಾರದವರು ನಮ್ಮನ್ನು ಕೇಳಿದ್ದಾರೆ. ಮೊದಲನೆಯದಾಗಿ ಈ ವರದಿ ಕನ್ನಡದಲ್ಲಿ ಅಚ್ಚಾಗದೇಯಿರುವುದು ವಿಷಾದಕರ ಎಂಬುದನ್ನು ನಾನು ತಮಗೆ ಹೇಳ ಬೇಕೆಂದಿದ್ದೇನೆ. ಇದು ಇಂಗ್ಲೆಂಡ್ ದೇಶಕ್ಕೆ ಕೊಡುತ್ತಾ ಇರುವ ವರದಿ ಅಲ್ಲ. ಸಾಮಾನ್ಯವಾಗಿ ಇದು ಈ ಮಾನ್ಯ ಸಭೆಯ ಸದಸ್ಯರಿಗೆ ಗೊತ್ತಾಗ ಬೇಕು, ಜನ ಸಾಮಾನ್ಯರಿಗೆ ಗೊತ್ತಾಗಬೇಕು. ಎರಡನೆಯದಾಗಿ ಈ ವರದಿಗೆ ಒಂದು ಇಂಡೆಕ್ಸ್ ಅಥವಾ ಸೂಚಿ ಇಲ್ಲ. ಮೂರು ಸಲ ಓದಿದರು ಪುನಃ ಓದುತ್ತಾ ಹೋಗಬೇಕು. ಯಾವ ಪುಟದಲ್ಲಿ ಏನು ವಿಷಯ ಇದೆ ಎಂಬುದನ್ನು ಕಂಡು ಹಿಡಿಯುವುದು ಬಹಳ ಕಷ್ಟ. 626-627 ಪುಟಗಳು ಇವೆ. ಇನ್ನೊಂದು ಮುಖ್ಯವಾದ ಅಂಶವನ್ನು ನೀವು ಗಮನಿಸಬೇಕು. ಈ ಸಮಿತಿ 1960ನೇ ಅಕ್ಟೋಬರ್‌ನಲ್ಲಿ ರಚಿತವಾಯಿತು. ವರದಿಯನ್ನು

(ಶ್ರೀ ಎಸ್. ಗೋಪಾಲ ಗೌಡ)

62 ನೇ ಸೆಪ್ಟಂಬರ್‌ನಲ್ಲಿ ನಾವು ಚರ್ಚೆಮಾಡುತ್ತಾ ಇದ್ದೇವೆ. ಎರಡು ವರ್ಷ ತುಂಬುತ್ತದೆ ಈ ವರದಿಗೆ. ಇನ್ನೊಂದು ವಿಷಯವೇನೆಂದರೆ ಮೊದಲು ಮೇಲ್ಮನೆಯಲ್ಲಿ ಈ ವರದಿಯ ಚರ್ಚೆಗೆ ಸರ್ಕಾರದವರು ಅವಕಾಶ ಮಾಡಿಕೊಟ್ಟು ಆ ಮೇಲೆ ಏನೋ ಕಾಲಹರಣ ಮಾಡುವುದಕ್ಕೆ, ಅಸೆಂಬ್ಲಿಯನ್ನು ಎಂಗೇಜ್ ಮಾಡುವುವಕ್ಕೆ, 3 ದಿವಸ ತಮ್ಮ ಬೇರೆ ಏನೇನೋ ಕೆಲಸಗಳನ್ನು ಮುಗಿಸಿಕೊಳ್ಳುವುದಕ್ಕೆ ಇದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ವರದಿಯನ್ನು ಸಭೆಯ ಮುಂದೆ ಇಡಬೇಕಾಗಿತ್ತು ಇಡಲಿಲ್ಲ ಎಂದು ಕೆಲವರು ಟೀಕೆ ಮಾಡಿದ್ದರಿಂದ ಇಡೋಣ ಅಂತ ಇಟ್ಟಿದ್ದಾರೆ.

ಇನ್ನು ಸಮಿತಿ ವಿಷಯದಲ್ಲಿ ಹೆಚ್ಚು ಏನೂ ಹೇಳಬೇಕಾದ್ದಿಲ್ಲ. ಇದರಲ್ಲಿ ಯಾರೂ ತಜ್ಞರು ಇರಲಿಲ್ಲ ಎಂದು ಹೇಳಬಹುದು, ಒಳ್ಳೆಯ ಅನುಭವಿಗಳು ಇದ್ದರು. ಬಹಳ ಕಷ್ಟ ಪಟ್ಟಿದ್ದಾರೆ. ಹಿಂದಿನ ಅನೇಕ ಸಮಿತಿಗಳ ವರದಿಗಳನ್ನೆಲ್ಲಾ ಓದಿದ್ದಾರೆ. ಪ್ರವಾಸ ಮಾಡಿದ್ದಾರೆ, ಅನೇಕ ಕೈಗಾರಿಕಾ ಸಂಸ್ಥೆಗಳನ್ನು ಸಂದರ್ಶಿಸಿ ನೋಡಿದ್ದಾರೆ. ಅನೇಕ ಇಲಾಖೆಗಳ ಮುಖ್ಯಸ್ಥರನ್ನು ಕಂಡಿದ್ದಾರೆ ಮಾತು ಕತೆ ನಡೆಸಿದ್ದಾರೆ. ಅವರು ಈ ರಾಜ್ಯದ ಆರ್ಥಿಕ ವ್ಯವಹಾರಗಳು ಮತ್ತು ಈ ರಾಜ್ಯದ ಹುಟ್ಟುವಳಿ, ಈ ರಾಜ್ಯ ಹೇಗೆ ನಡೆದುಕೊಂಡು ಹೋಗುತ್ತಾ ಇದೆ ಎನ್ನುವುದರ ಬಗ್ಗೆ ಸಾಕಾದಷ್ಟು ಅಂಕಿ ಅಂಶಗಳನ್ನು ಸಂಗ್ರಹಿಸಿ, ಕಷ್ಟ ಪಟ್ಟು ಈ ವರದಿಯನ್ನು ಸಂಪಾದನೆ ಮಾಡಿದ್ದಾರೆ. ಆದ್ದರಿಂದ ಯಾರಿಗಾದರೂ ಕೂಡ ಒಬ್ಬ lay-man ಅಂತ ಏನು ಹೇಳುತ್ತೇವೆ ಸಾಮಾನ್ಯ ಮನುಷ್ಯನಿಗೂ ಮೈಸೂರು ಸರ್ಕಾರ ಹೇಗೆ ನಡೆಯುತ್ತದೆ ಅದರ ರೂಪು ರಚನೆಗಳೇನು, ಸೆಕ್ರೆಟೇರಿಯಟ್‌ನೊಳಗೆ ಯಾವ ರೀತಿ ಇದೆ, ತಾಲ್ಲೂಕ್ ಮಟ್ಟದಲ್ಲಿ ಹೇಗೆ ನಡೆಯುತ್ತದೆ ಎಂಬುದನ್ನು ತಿಳಿದು ಕೊಳ್ಳುವುದಕ್ಕೆ ಈ ವರದಿ ಬಹಳ ಸಹಾಯಕವಾಗಿದೆ. ಆದ್ದರಿಂದ ಈ ಸಮಿತಿಯ ಸದಸ್ಯರಿಗೆ ನಾವು ಬಹಳ ಕೃತಜ್ಞರಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸರ್ಕಾರದವರಿಗ ಇದು ಹೊಸ ಸಮಿತಿಯೇನಲ್ಲ. ಹಿಂದೆ ಅನೇಕ ಸಮಿತಿಗಳನ್ನು ನೋಡಿದ್ದೇವೆ. ಅದರಲ್ಲಿ ಬಹಳ ಪ್ರಖ್ಯಾತವಾದ ಸಮಿತಿಗಳು ಎಂದರೆ ಶ್ರೀಮಾನ್ ಮಾಧವರಾಯರ ಸಮಿತಿ ಅನಂತರದಲ್ಲಿ ಶ್ರೀಮಾನ್ ಗೋರ್‌ವಾಲಾರವರ ಸಮಿತಿ , ಆನಂತರದಲ್ಲಿ ಈ ಸಮಿತಿ ರಚನೆಯಾಗಿದೆ. ಸಮಿತಿಯವರೇ ಹೇಳಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಮೈಸೂರು ರಾಜ್ಯವೇ ಇಂಥಾ ಒಂದು ಸಮಿತಿಯನ್ನು ರಚನೆ ಮಾಡಿದ್ದು, ಇದೇ ಮೊಟ್ಟಮೊದಲು. ಇಲ್ಲಿ ಮುಖ್ಯವಾಗಿ, ಅದೇನೋ, ಸಮಿತಿಯವರಿಗೆ terms of reference ಎಂದು ಹೇಳಬಹುದು—ಅವರ ಇತಿ ಮಿತಿ, ಅವರ ಪ್ರಕಾರ ಇರತಕ್ಕಂಥ ವ್ಯವಸ್ಥೆಯನ್ನು ತಲೆ ಕೆಳಕು ಮಾಡದೇ ಹಾಗೇಯೇ ಉಳಿಸಿಕೊಂಡು, ಇದರಲ್ಲಿ ಎಷ್ಟು ಮಟ್ಟಿನ ಸುಧಾರಣೆಯನ್ನು ತರಬಹುದೋ ಅಂಥಾ ಸುಧಾರಣೆಗಳನ್ನು ಅವರು ಹೇಗೆ ಮಾಡಬೇಕಾಗಿತ್ತೊ ಹಾಗೆಯೇ ಮಾಡಿದ್ದಾರೆ. ಇದರಲ್ಲಿ ನನಗೆ ಮೊದಲನೆಯ ಶಂಕೆ ಏನೆಂದರೆ—ಸಾಮಾನ್ಯವಾಗಿ ಬೀಸುವ ದೊಣ್ಣೆ ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರದವರು–ಎಲ್ಲಾ ಸರ್ಕಾರಗಳವರೂ-ಸಮಿತಿ ರಚನೆ ಮಾಡುವುದು ಸ್ವಾಭಾವಿಕ. ಹಿಂದೆ ರಚಿಸಿದಂಥ ಸಮಿತಿಗಳ ಬಗ್ಗೆ ಈ ಸಮಿತಿಯವರೇ ತಮ್ಮ ಭಯವನ್ನು ವಕ್ತಮಾಡಿದ್ದಾರೆ. ನಮ್ಮ ಮಾನ್ಯ ಅಧ್ಯಕ್ಷರು ಕೂಡ ಈ ಸಮಿತಿಯ ಸದಸ್ಯರಾಗಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಮೊದಲನೆಯದಾಗಿ ಏನು ಹೇಳಿದ್ದಾರೆ ಎಂದರೆ ಸಮಿತಿಯನ್ನು ರಚನೆ ಮಾಡುತ್ತಿರಿ ಆ ಮೇಲೆ ಅದರ ವರದಿಯ ಬಗ್ಗೆ ಸರ್ಕಾರ ಸಾಕಾದಷ್ಟು ಗಂಭೀರವಾದ ರೀತಿಯಲ್ಲಿ ವಿಚಾರ ಮಾಡುವುದಿಲ್ಲ. ಕಾರ್ಯಗತವಂತೂ ಮಾಡುವುದಿಲ್ಲ. ಗೋರ್‌ವಾಲಾ ಅವರ ಕಮಿಟಿ ರಿಪೋರ್ಟ್ ಮತ್ತು ಈ ಸಮಿತಿಗೆ ಹಿಂದೆ ಅನೇಕ ಸಮಿತಿಗಳು ಏನು ವರದಿ ಕೊಟ್ಟಿದ್ದಾರೆ ಆ ವರದಿಗಳ ಬಗ್ಗೆ ಸರ್ಕಾರ ಬಹಳ ತಿರಸ್ಕಾರ ಭಾವನೆ ತೋರಿಸಿತು. ಹಾಗೆಯೇ ಈ ಸಮಿತಿಯ ಬಗ್ಗೆಯೂ ಆಗ ಬಾರದು ಎಂದು ಹೇಳಿ ಅವರು ಮೊದಲೇ ಒಂದು ಎಚ್ಚರಿಕೆ ರೂಪದಲ್ಲಿ ಹೇಳಿದ್ದಾರೆ. ಈಗಾಗಲೇ ಸರ್ಕಾರ ತಾತ್ಸಾರದ ತೋರಿಸುತ್ತಾ ಇದೆ ಎನ್ನುವುದು ನಮಗೆ ಬೇಕಾದಷ್ಟು ಗೊತ್ತಾಗಿದೆ. ಈ ಅಸೆಂಬ್ಲಿಯ ಮುಂದೆ ತರುವುದಕ್ಕೆ ಅವರಿಗೆ ಬಹಳ ಪೇಚಾಟ. ಹೇಗಿದ್ದರೂ ಪ್ರಿಂಟ್ ಆಗಿದೆ, ನಾವು ಸೆಕ್ರೆಟರಿಯಟ್ ಲೆವಲ್‌ನಲ್ಲಿ ಸಮಿತಿ ರಚನೆ ಮಾಡಿದ್ದೇವೆ ಅವರು ಓದಿ ಏನು ಮಾಡಬೇಕು. ಏನು ಮಾಡ ಬಾರದು ಎಂದು ಹೇಳುತ್ತಾರೆ ಎಂದು ಸರ್ಕಾರದವರ ವಾದ.

4-30 P.M.

ಆದರೆ ಅವರು ಇಷ್ಟು ಅವಸರದಿಂದ ತೆರಿಗೆ ಹಾಕುವುದಕ್ಕೆ ಬಹಳ ಮುಂದೆ ಬಂದರು. ಈ ಸಲ ಇದು ತೆರಿಗೆಗಳಿಗಾಗಿ ಕರೆದಿರುವ ಅಧಿವೇಶನ ಎಂದು ನಾವು ಹೇಳಬಹುದು. ಮುಖ್ಯವಾಗಿ ಈ ಸಮಿತಿಯವರಿಗೆ ವಹಿಸಿದ್ದ ಜವಾಬ್ದಾರಿಯೇನೆಂದರೆ ನಾವು ಮೂರನೆಯ ಯೋಜನೆಯನ್ನು ಕಾರ್ಯಗತ ಮಾಡಬೇಕಾಗಿದೆ, ಅದಕ್ಕೆ 250 ಕೋಟಿ ರೂಪಾಯಿಗಳ ಖರ್ಚಿದೆ, ಬಹಳ ದೊಡ್ಡ ಯೋಜನೆ, ಇದಕ್ಕೆ ನಮ್ಮಲ್ಲಿ ಸಾಧನ ಸಂಪತ್ತಿನ ಕೊರತೆಯಿದೆ, ನಾವು 42 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನುಗಳಿಸಲು ಮಾರ್ಗ ತೋರಿಸಬೇಕು ಎಂಬುದು. ಸಮಿತಿಯವರು ಹಿಂದೆ ನಾವು ಹೇಳಿದ ಹಾಗೆ ಬೇಕಾದ ಹಣವನ್ನು ತೆರಿಗೆಗಳಿಂದ ಒಳ್ಳೆಯ ರೀತಿಯಲ್ಲಿ ವಸೂಲು ಮಾಡಿಕೊಳ್ಳಿ, ಸಾಧ್ಯವಾದ ಮಟ್ಟಿಗೂ ಉಳಿತಾಯದ ಕಡೆ ಗಮನಕೊಡಿ' ಯಾವ ಹಣವನ್ನೂ ದುರ್ವ್ಯಯ ಮಾಡುವುದಕ್ಕೆ ಅವಕಾಶ ಕೊಡಬೇಡಿ, ಇಷ್ಟೆಲ್ಲಾ ಮಾಡಿಯೂ ನಿಮಗೆ ಕೊರತೆ ಕಂಡುಬಂದರೆ ಆಗ ಹೊಸ ತೆರಿಗೆಗಳನ್ನು ಹಾಕುವ ವಿಚಾರ ಗಮನಿಸಬಹುದು ಎಂದು ಹೇಳಿದ್ದಾರೆ. ಇದ್ಯಾವುದನ್ನೂ ಮಾಡದೆಯೇ ಸರ್ಕಾರ ವರ್ಷಕ್ಕೆ 20 ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಬಹುಬೇಗ ಮುಂದೆ ಬಂದಿದೆ. ಈಗಾಗಲೇ ಕೆಲವು ಮಸೂದೆಗಳಿಗೆ ಅಂಗೀಕಾರ ಪಡೆದಿದ್ದಾರೆ, ಇನ್ನು ಕೆಲವು ತೆರಿಗೆಯ ಮಸೂದೆಗಳು ಹಾಗೆಯೇ ಉಳಿದಿವೆ. ಈ ವರದಿಯಲ್ಲಿ ಬಹಳ ಸ್ವಾರಸ್ಯಕರವಾದ ಕೆಲವು ವಿಮರ್ಶೆಗಳು ನನಗೆ ಕಂಡು ಬಂದಿವೆ. ಶ್ರೀ ಸಂತಾನಂರವರು ಒಂದು ಮಾತನ್ನು ಹೇಳಿದ್ದಾರೆ. ಅದರ ಉಲ್ಲೇಖವಿದೆ. ಅವರು ಈಗ ಲಂಚ ನಿರೋಧ ಶಾಖೆ ದೇಶದಲ್ಲೇನಿದೆ, ಅದಕ್ಕೆ ಸಂಬಂಧಿಸಿದ ಸಮಿತಿಯ ಛೇರ್ಮನ್ ಆಗಿದ್ದಾರೆ. ಈಗಾಗಲೇ ಅವರು ಕೆಲವರಲ್ಲಿ ಭಯವನ್ನುಂಟು ಮಾಡಿರಬಹುದೆಂದು ಕಾಣುತ್ತದೆ. ಅವರು ಕೆಲವು ವಿಚಾರಗಳನ್ನು ಚೆನ್ನಾಗಿ ಹೇಳಿದ್ದಾರೆ ನಮ್ಮ ಯೋಜನೆಯು ಅನೇಕ ಅಗ್ಸಿಲರೇಟರ್‌ಗಳನ್ನೊಳಗೊಂಡು ಸ್ಪೀಡಾಮೀಟರ್, ಪ್ಯೂಯಲ್‌ಗೇಜ್, ಬ್ರೇಕ್ ಇವುಗಳಿ

ಲ್ಲದ ಮೋಟಾರ್ ಕಾರಿನಂತಿದೆ, He compares planning to a motor car with many accelerators without speedometer, fuel gauge or breaks ಎಂದು ಹೇಳಿದ್ದಾರೆ. ಈ ವಾಕ್ಯದಿಂದ ನಮ್ಮ ಸ್ಥಿತಿ, ನಾವು ಹೋಗುವ ದಿಕ್ಕು ಬಹಳ ಚೆನ್ನಾಗಿ ಅರ್ಥವಾಗುತ್ತದೆ. ಇನ್ನೊಂದು ಬಹಳ ಸ್ವಾರಸ್ಯವಾದ ವಿಷಯ ಈ ಸ್ಥಿತಿಯಲ್ಲಿದ್ದರೂ ನಾವು ಯಾವ ಕಡೆ ಹೋಗುತ್ತಿದ್ದೇವೆ ಎಂಬುದನ್ನು ಹೇಳಿರುವುದು ! ಯೋಜನೆಗಳನ್ನೇನೋ ಹಾಕುತ್ತಿದ್ದೇವೆ. ಒಂದು ಯೋಜನೆ ಆಯಿತು, ಎರಡನೆಯ ಯೋಜನೆ ಆಯಿತು, ಮೂರನೆಯ ಯೋಜನೆ ನಡೆಯುತ್ತಿದೆ. ಇದು ಮುಂದಿನ ಯೋಜನೆಗೆ ಬುನಾದಿ, ದಾರಿ ಮಾಡಿ ಕೊಡುತ್ತದೆ. ಇದನ್ನು ನೋಡಿದರೆ ಬಹಳ ವಿಚಿತ್ರವಾಗಿದೆ ಎಂದು ಹೇಳುತ್ತಾರೆ. ನಾವು ಯೋಜನೆ ಪ್ರಕಾರ ಮುಂದುವರೆಯುತ್ತಿದ್ದೇವೆಯೇ ಎಂಬುದು ಅನುಮಾನಾಸ್ಪದವಾಗಿದೆ. ' To ask if we are drifting towards a plan or planning towards drift' ಎಂದು ಪ್ರಸ್ತಾಪಿಸಲ್ಪಟ್ಟಿದೆ. ಈ ತರಹ ನಮ್ಮ ಯೋಜನೆಗಳಿವೆ ಎಂದು ಅವರು ಹೇಳಿದ್ದಾರೆ. ಈ ಭಯ ನಮಗೆ ಕಂಡು ಬರುತ್ತಿದೆ. ಯೋಜನೆಯು ಕ್ರಮಬದ್ಧವಾಗಿ ನಡೆಯುತ್ತಿದೆಯೇ ಎಂಬ ಶಂಕೆಯಿದೆ. ಮುಖ್ಯವಾಗಿ ಯೋಜನೆಗೆ ಹಣ ಬೇಕು, ಹಣ ಕೊಡಿ ಎಂದು ಸರ್ಕಾರ ಬಹಳ ಲಗು ಬಗೆಯಿಂದ ಯಾವಾಗಲೂ ಸಭೆಯ ಮುಂದೆ ವಿನಂತಿ ಮಾಡಿಕೊಳ್ಳುತ್ತಿದೆ. ನಾವು ಒಪ್ಪದಿದ್ದರೂ ಅಂಗೀಕಾರವಾಗುತ್ತದೆ. ನಾವು ಅಸಹಾಯಕರಾಗಿದ್ದೇವೆ. ಈ ವಿಚಾರವನ್ನು ಬಹಳ ಜವಾಬ್ದಾರಿಯಿಂದ ಸರ್ಕಾರ ಯೋಚನೆ ಮಾಡುವುದು ಒಳ್ಳೆಯದು. ರಾಜಕೀಯದ ದೆಶೆಯಿಂದ ಸಭೆಯಲ್ಲಿ ಮಂತ್ರಿಗಳ ಹಾಜರಿ ಬಹಳ ಕಡಮೆಯಿದೆ. ಮಿತವ್ಯಯ ಸಮಿತಿ ವರದಿ ಚರ್ಚೆ, ಪರವಾಗಿಲ್ಲ, ಎಲ್ಲಿ ಬೇಕಾದರೂ ಹೋಗಬಹುದು ಎಂಬ ಭಾವನೆ ಮಂತ್ರಿಗಳಲ್ಲಿದೆ. ಯೋಜನೆಗಳ ಬಗ್ಗೆ ಈ ವರದಿ ಬಹಳ ಸಹಕಾರಿಯಾಗಿದೆ. ಪ್ರತಿಯೊಬ್ಬ ಮಂತ್ರಿಗಳೂ ಇದನ್ನು ಓದಿದ್ದಾರೆಂದು ಭಾವಿಸುತ್ತೇನೆ ಮತ್ತು ಸಂಬಂಧಪಟ್ಟ ದೊಡ್ಡ ದೊಡ್ಡ ಇಲಾಖಾ ಮುಖ್ಯರೂ ಕೂಡ ಇದನ್ನೆಲ್ಲಾ ಓದಿದ್ದಾರೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಉಪಯುಕ್ತವಾದ ಸಲಹೆಗಳಿವೆ. ಮತ್ತು ಸಾಕಷ್ಟು ಅಂಕಿ ಅಂಶಗಳನ್ನು ಸಂಗ್ರಹಿಸಿದ್ದಾರೆ. ನಮ್ಮ ಲೋಪದೋಷಗಳನ್ನು ತಿದ್ದಿಕೊಳ್ಳುವುದಕ್ಕೆ ಈ ವರದಿ ಸಹಾಯಕವಾಗುತ್ತದೆ. ಮುಖ್ಯವಾಗಿ ಈಗ ಬರತಕ್ಕ ಆದಾಯವನ್ನು ಹೆಚ್ಚು ಮಾಡಿಕೊಳ್ಳಲು ಸರ್ಕಾರದ ಗಮನ ಕೊಡಬೇಕು. ಕೊರತೆ ಬಂದಲ್ಲಿ ಮಾತ್ರ ಹೊಸ ತೆರಿಗೆಗಳನ್ನು ಹಾಕಬೇಕು ಎಂದು ಸಮಿತಿಯವರು ಹೇಳಿರುವುದನ್ನು ಕಟ್ಟುನಿಟ್ಟಾಗಿ ಸರ್ಕಾರದವರು ಪರಿಪಾಲನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಬಹಳ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈ ಯೋಜನೆಗಳಲ್ಲೂ, ಯೋಜನೆಯ ಹೊರಗಡೆಯೂ ಸರ್ಕಾರದವರು ಅನೇಕ ರೀತಿಯ ಕಮಿಟ್‌ಮೆಂಟ್ ಈಗಾಗಲೇ ಮಾಡಿಕೊಂಡಿದ್ದಾರೆ. ಮುಂದೆ ಇಂಥ ಯಾವುದೂ ಕೂಡ ಮಾಡಿಕೊಳ್ಳಬಾರದು ಮತ್ತು ಪ್ರತಿಯೊಂದು ರೂಪಾಯಿ ಕೂಡ ಯೋಜನೆಗೇ ಖರ್ಚಾಗಬೇಕೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಒಂದು ವಿಷಯದ ಕಡೆ ಸಭೆಯ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ. ಶರಾವತಿ ಪ್ರಾಜೆಕ್ಟಿನ ಕಂಟ್ರಾಕ್ಟ್ ಕೆಲಸಗಳು ಹೇಗೆ ನಡೆದುವು, ಈಗ ಹೇಗೆ ನಡೆಯುತ್ತಿವೆ ಎಂಬ ವಿಚಾರದಲ್ಲಿ ಈ ಸಭೆಯಲ್ಲಿ ಪ್ರಶ್ನೆಗಳ ಮೂಲಕ ಚರ್ಚೆಯಾಗಿದೆ. ಮುಖ್ಯ ಮಂತ್ರಿಗಳು ಇದೆಲ್ಲಾ ಸಾಮಾನ್ಯ, ಮಾಮೂಲು ಎಂದು ಹೇಳಿದರು. ನನಗೆ ಬಹಳ ಆಶ್ಚರ್ಯವಾಯಿತು. ಯಾವಾಗ ಮುಖ್ಯ ಮಂತ್ರಿಗಳೇ ಹೀಗೆ ಹೇಳಿದರೋ ಯಾರು ಹೆದರಬೇಕಾಗಿಲ್ಲ ತಾನೆ ?

ಇದರಲ್ಲಿ ಹೀಗೆ ಹೇಳುವುದಕ್ಕೆ ಸಾಧ್ಯವೆ, ಅದರಲ್ಲಿಯೂ ಜವಾಬ್ದಾರಿ ಹೊತ್ತಿರುವವರು ಹೀಗೆ ಮಾತನಾಡಲು ಸಾಧ್ಯವೆ ಎಂದು ನನಗೆ ಆಶ್ಚರ್ಯವಾಯಿತು. ಆದರೆ ಹೇಳಿದ್ದಾರೆ. ಶರಾವತಿಯ ಬಗ್ಗೆ ಸಮಿತಿಯವರು ಒಂದು ಕಡೆ ಹೇಳುತ್ತಾರೆ ಅವರ ವರದಿಯಲ್ಲಿ. ಅದನ್ನು ಮಾನ್ಯ ಸದಸ್ಯರೆಲ್ಲರೂ ಓದಿದ್ದಾರೆ. ಪುಟ 239ರಲ್ಲಿ—

"So far as the Sharavathi Valley Project is concerned, the vicissitudes of its execution are due to several changes in designs and scope of the project during the execution. When the project was taken up the estimated cost was Rs. 55 crores. The estimate now stands revised to Rs. 80 crores. The cost per kW., as per original estimate was Rs. 550, the lowest for a Hydro-Electric Project in India. The speedy execution of this most economical project would have been a national gain, but delay in execution has now put up the construction cost by more than 50 per cent". ಎಂದು ಹೇಳಿದ್ದಾರೆ.

ಈ ಸಮಿತಿಯ ಸದಸ್ಯರಾಗಿದ್ದ ಡಾ॥ ಭೋಲಾ ಪಂತ್ ಎಂಬುವರು ಒಂದು dissenting note ಕೊಟ್ಟಿದ್ದಾರೆ. ಅದರಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆ ಯಾವ ಸ್ಥಿತಿಗೆ ಬಂದಿದೆ ಎನ್ನುವ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅದನ್ನು ಗಮನಿಸಬೇಕು.

"...As a result, there has been a continuing decline in the standards of rectitude of personnel, integrity of organisation and quality of work, both relating to the Department as well as to the contractor."

ಇದಕ್ಕೆ ಕೇಂದ್ರ ಸರ್ಕಾರ ಮಾಡಿರುವ ಹಾಗೆ ನಾವೂ ಮಾಡಬೇಕಾಗುತ್ತದೆ. ನಾವೂ ನೂರಾರು ಕೋಟಿ ರೂಪಾಯಿಗಳ ಕೆಲಸ ಮಾಡಬೇಕಾಗುತ್ತದೆ. ಇದಕ್ಕಾಗಿ ಒಂದು State Construction Corporation ಎಂದು ಸರ್ಕಾರ ಮಾಡಬೇಕು, ಅದರ ಮೂಲಕ ಕೆಲಸಗಳನ್ನು ಮಾಡಿಕೊಂಡು ಹೋಗಬೇಕು, ಇಲ್ಲದಿದ್ದರೆ ಸಕಾಲದಲ್ಲಿ ಸರಿಯಾದ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಸಲಹೆ ಮಾಡಿದ್ದಾರೆ. ಹಾಗೆಯೇ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಸಲಹೆ ಮಾಡಿದ್ದಾರೆ. ಸಮಿತಿಯ ಇನ್ನೊಬ್ಬರು ಸದಸ್ಯರಾದ ಶ್ರೀ ರಾಮಪ್ಪನವರು ಹೆಚ್ಚು ತೆರಿಗೆಗಳನ್ನು ಹಾಕುವುದನ್ನು ನಾನು ಒಪ್ಪುವುದಿಲ್ಲವೆಂದು ಹೇಳಿದ್ದಾರೆ, ಅದಕ್ಕೆ ಕಾರಣವನ್ನೂ ಕೊಟ್ಟಿದ್ದಾರೆ. ಸಮಿತಿಯವರು ಸುಮಾರು 412 ಸಲಹೆಗಳನ್ನು ಸರ್ಕಾರಕ್ಕೆ ಮಾಡಿದ್ದಾರೆ. ಪ್ರತಿಯೊಂದು ಇಲಾಖೆಯಲ್ಲಿಯೂ ಏನೇನು ಆಗಬೇಕು, ಯಾವರೀತಿ ಉಳಿತಾಯ ಮಾಡಬೇಕು

(ಶ್ರೀ ಎಸ್. ಗೋಪಾಲ ಗೌಡ)

ಎಂಬುದನ್ನು ಸೂಚಿಸಿದ್ದಾರೆ. ನಾಲ್ಕು ಡಿವಿಜನ್‌ಗಳನ್ನು ಮೂರು ಡಿವಿಜನ್‌ಗಳಿಗೆ ಕಡಮೆ ಮಾಡಬೇಕೆಂದು ಹೇಳಿದ್ದಾರೆ, ಜಿಲ್ಲೆ ಮತ್ತು ತಾಲ್ಲೂಕುಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಆದರೆ ಈಗಾಗಲೇ ಸಣ್ಣ ತಾಲ್ಲೂಕಿನವರು ಮತ್ತು ಸಣ್ಣ ಜಿಲ್ಲೆಯವರು ಇದು ಆಗಬಾರದೆಂದು ಹೇಳುತ್ತಿದ್ದಾರೆ. ಇದು ಸ್ವಾಭಾವಿಕ. ಆದರೆ ದೂರ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ದೊಡ್ಡ ಜಿಲ್ಲೆಗಳಿದ್ದರೆ ಒಳ್ಳೆಯದೆಂದು ಹೇಳುತ್ತಾರೆ, ಮತ್ತೆ ಕೆಲವರು ಸಣ್ಣ ಸಣ್ಣ ಜಿಲ್ಲೆಗಳಿದ್ದರೆ ಒಳ್ಳೆಯದೆಂದು ಹೇಳುತ್ತಾರೆ. ಒಳ್ಳೆಯ ರೀತಿಯಲ್ಲಿ, ಕಡಮೆ ವೆಚ್ಚದಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗಲು ಏನು ಅಗತ್ಯವೋ ಅದನ್ನು ಮಾಡಬೇಕು. ಸರ್ಕಾರದವರು ಈ ಸಲಹೆಗಳನ್ನು ಇನ್ನೊಮ್ಮೆ ಪರಿಶೀಲನೆ ಮಾಡಿ, ಇವುಗಳಲ್ಲಿ ಯಾವುದನ್ನು ಹೆಚ್ಚು ತುರ್ತಾಗಿ ಮಾಡಬೇಕು, ಯಾವುದನ್ನು ಹೆಚ್ಚು ಚರ್ಚೆ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ಸರ್ಕಾರ ಆದಷ್ಟು ಬೇಗ ಗಮನ ಕೊಟ್ಟು ಕಾರ್ಯಗತಮಾಡುತ್ತಾರೆಂದು ಆಶಿಸುತ್ತೇನೆ. ಸರ್ಕಾರಕ್ಕೆ ತೊಡಕು ಬರುತ್ತದೆ. ಸರ್ಕಾರಿ ಯಂತ್ರ ಹದಿನೈದು ವರ್ಷಗಳಿಂದ ಒಂದೇ ಸಮನೆ ಬೆಳೆದು ಬರುತ್ತಿದೆ. ಈ ದೇಶದಲ್ಲಿ ಏನು ಪ್ರಗತಿಯಾಗಿದೆಯೆಂದರೆ ಸರ್ಕಾರದ ಬೆಳವಣಿಗೆಯಾಗಿದೆ, ಇದು ಹೆಚ್ಚಾಗಿದೆಯೆಂದು ಹೇಳಬಹುದು. ಪಾರ್ಕಿನ್‌ಸನ್ ಎನ್ನುವವರು ಬರೆದಿದ್ದಾರೆ. ಇಲಾಖೆಗಳಲ್ಲಿ ಜನರ ಸಂಖ್ಯೆ ಬೆಳೆದುಕೊಂಡು ಹೋದಹಾಗೆ, ಅವರು ತಮಗೆ ಬೇಕಾದ ಕೆಲಸಗಳನ್ನು ಬೆಳೆಸುತ್ತಾರೆ. ತಮಗೆ ಹೆಚ್ಚು ಸಂಬಳ ಕೊಡುತ್ತಾರೆಂದು ಹೀಗೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಅಮೇರಿಕದ ರಾಯಭಾರಿ ಗಾಲ್‌ಬ್ರೆತ್ ಅವರೂ ಇತ್ತೀಚಿನ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ಒಂದು ದೊಡ್ಡ ಇಲಾಖೆ ಸೃಷ್ಟಿಯಾಗುತ್ತದೆ, ಇದು ಆಶ್ಚರ್ಯಕರವೆಂದು ಹೇಳಿದ್ದಾರೆ. ಹೀಗಾಗಬಾರದು, ಕೆಲಸ ಆರಂಭವಾದ ಮೇಲೆ, ಜನರನ್ನು ಅಗತ್ಯಕ್ಕೆ ತಕ್ಕಂತೆ ನೇಮಿಸಬೇಕು. ಒಂದು ಯೋಜನೆಯಾಗಬೇಕೆಂದರೆ, ಕಟ್ಟಡ ಕಟ್ಟಲು ಆಗಲೇ ಸಿಬ್ಬಂದಿ, ಎಂಜಿನಿಯರುಗಳನ್ನು ಮಂಜೂರು ಮಾಡಿ ನೇಮಕ ಮಾಡುತ್ತಾರೆ. ಆರಂಭಶೂರತ್ವ ಮತ್ತು ಮಿತಿಯಿಲ್ಲದ ಸಿದ್ಧತೆಯನ್ನು ಕಾಣಬಹುದು. ಇದು ಹಿಂದು ಮುಂದಿನ ಯೋಜನೆಯಂತೆ ಕಾಣುತ್ತದೆ. ಈ ವರದಿಯ ಬಗ್ಗೆ ನಾವು ಮಾಡತಕ್ಕ ಚರ್ಚೆ ವಿಫಲವಾಗಬಾರದೆಂದು ನನ್ನ ಆಶೆ. ಸರ್ಕಾರ ಎಷ್ಟುಮಟ್ಟಿಗೆ ಈ ವರದಿಯನ್ನು ಕಾರ್ಯಗತ ಮಾಡುವ ಧೈರ್ಯ ಮತ್ತು ಸಾಹಸವನ್ನು ತೋರಿಸುತ್ತಾರೋ ನನಗೆ ಗೊತ್ತಿಲ್ಲ. ಈ ಸಲಹೆಗಳನ್ನು ಕಾರ್ಯಗತ ಮಾಡುವುದಾದರೆ ಬಹುಶಃ ಇಲಾಖೆಯ ಅಧಿಕಾರಿಗಳಿಂದ ಬಹಳ ವಿರೋಧ ಬರಬಹುದು. ಈಗಿರುವ ಅಧಿಕಾರಿಗಳಿಂದಲೇ ಬರಬಹುದು. ಅನೇಕ ಕಡೆಗಳಲ್ಲಿ ಸಮಿತಿಯವರು forthwith close down ಎಂದು ಹೇಳಿದ್ದಾರೆ. ಸಂಬಂಧಪಟ್ಟ ಇಲಾಖಾಧಿಕಾರಿಗಳು ಇದನ್ನು ಹೇಗೆ ತೆಗೆದುಕೊಳ್ಳುತ್ತಾರೋ ಎಂಬ ಭಯವಿದೆ. ಸರ್ಕಾರಕ್ಕೆ, ಈ ವರದಿಯಲ್ಲಿ ಹೇಳಿರುವ ಪ್ರಕಾರ ಸುಮಾರು ನಾಲ್ಕು ಕೋಟಿ ರೂಪಾಯಿ ಉಳಿತಾಯ ತೋರಿಸಿದ್ದಾರೆ. ಸೆಕ್ರೆಟೇರಿಯಟ್, ಡಿವಿಜನ್‌ಗಳು ಮತ್ತು ಜಿಲ್ಲಾ ಮಟ್ಟಗಳಲ್ಲಿರುವ ಹೆಚ್ಚಿನ ಸಿಬ್ಬಂದಿಯನ್ನು ಕಡಮೆ ಮಾಡಬೇಕೆಂದು ಸೂಚಿಸಿದ್ದಾರೆ. ಉದಾಹರಣೆ ಹೇಳುವುದಾದರೆ, ಶರಾವತಿ ಯೋಜನೆಯನ್ನು ಇಲಾಖೆಯ ಮೂಲಕ ಮಾಡುತ್ತೇವೆಂದು ಎಷ್ಟೋ ಡಿವಿಜನ್‌ಗಳನ್ನು ಮಾಡಿದರು. ಆದರೆ ಆಮೇಲೆ ಆ ಯೋಜನೆಯ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಟ್ಟರು. ಆದರೂ ಅಲ್ಲಿನ ಯಾವ ಡಿವಿಜನ್ನನ್ನೂ ಮುಚ್ಚಲಿಲ್ಲ. ಈಗ ಅಲ್ಲಿ ಪರಿಸ್ಥಿತಿ ಯೇನಾಗಿದೆಯೆಂದರೆ, ಕಂಟ್ರಾಕ್ಟರುಗಳು ತಮ್ಮ ಕೈಕೆಳಗೆ ಕೆಲಸ ಮಾಡುವ ಇಂಜಿನಿಯರಿಗೆ ಒಂದು ಸಾವಿರ ರೂಪಾಯಿನಿಂದ ಹಿಡಿದು ಮೂರು ಸಾವಿರ ರೂಪಾಯಿ ವರೆಗೆ ಸಂಬಳ ಕೊಡುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆಂದು ನಮ್ಮ ಇಂಜಿನಿಯರುಗಳು ನೋಡುತ್ತಾರೆ. ಒಂದೊಂದು ಸಲ ನಮ್ಮ ಇಂಜಿನಿಯರುಗಳನ್ನು ಕತ್ತು ಹಿಡಿದು ತಳ್ಳುವುದೂ ಉಂಟು, ಇಲ್ಲಿ ನಿಮಗೇನು ಕೆಲಸ ಎಂದು ಹೇಳಿ ಕಂಟ್ರಾಕ್ಟರುಗಳಲ್ಲಿ ನಂಬಿಕೆಯನ್ನಿಟ್ಟು ಅವರಿಗೇ ವಹಿಸಿದ ಮೇಲೆ ಇವರು ಅಲ್ಲಿ ಹೋಗಿ ನೋಡುವುದಾದರೂ ಏನು? 'ಪದ ಹೇಳೋದಕ್ಕೆ ಬಂದ್ಯಾ' ಎಂದು ನಮ್ಮಲ್ಲಿ ಹೇಳುತ್ತಾರೆ. ಕಂಟ್ರಾಕ್ಟರಿಗೆ ಕೊಟ್ಟ ಮೇಲೆ ಶರಾವತಿ ಯೋಜನೆಯ ಸಿಬ್ಬಂದಿ ಬೆಂಗಳೂರಿನಲ್ಲೇಕೆ ಇರಬೇಕೆಂಬುದು ಪ್ರಶ್ನೆ. ಅಲ್ಲಿ ಆಗತಕ್ಕ ದುರಂತವನ್ನು ತಡೆಗಟ್ಟುವುದಕ್ಕಾಗದೇ ಇದ್ದರೆ ಸಿಬ್ಬಂದಿಯನ್ನಿಟ್ಟೇನು ಪ್ರಯೋಜನ? ಕಂಟ್ರಾಕ್ಟರುಗಳು ಇಂಜಿನಿಯರುಗಳು ಅವರು ಮಾಡುವುದನ್ನು ನಮ್ಮ ಇಂಜಿನಿಯರುಗಳು ನೋಡಲು ಬಿಡುವುದಿಲ್ಲ. ಒಂದು ವೇಳೆ ಇವರು ಹೋದರೂ 'ನಾನೂ ಇಂಜಿನಿಯರಿಂಗ್ ಓದಿದ್ದೇನೆ, ಮೂರುಸಾವಿರ ಸಂಬಳ ತೆಗೆದುಕೊಳ್ಳುತ್ತೇನೆ, ನೀನೇ ನಯ್ಯ ಮೈಸೂರು ಇಂಜಿನಿಯರು ನೋಡುವುದು? ಹೋಗು' ಎಂದು ಹೇಳುತ್ತಾರೆ. ಇಂಥ ಸನ್ನಿವೇಶದಲ್ಲಿ ಲೋಕಕ್ಕೆ ಹಿತವಾದ ರೀತಿ ಲೋಕೋಪಯೋಗ ಇಲಾಖೆಯನ್ನು ಸರಿಯಾಗಿ ನಡೆಸುವುದನ್ನು ಸರ್ಕಾರ ತಿಳಿದುಕೊಳ್ಳದೇ ಹೋದರೆ ಹತ್ತು ವರ್ಷಗಳ ನಂತರ ವಿಷಾದಕರ ಪರಿಸ್ಥಿತಿ ಬರಬಹುದು. ಹತ್ತು ವರ್ಷಗಳಾದರೂ ಯಾವುದೇ ಕೆಲಸಕ್ಕೆ ಎಷ್ಟೆಷ್ಟು ಖರ್ಚುಮಾಡಿದ್ದೂ, ಎಷ್ಟೆಷ್ಟು ಪ್ರತಿಫಲ ಬಂದಿದೆ ಎಂಬುದನ್ನು ಅಳತೆ ಮಾಡುವುದಕ್ಕೆ ಅಂಕಿ ಅಂಶಗಳಿಲ್ಲವೆಂದು ಸಂತಾನಂ ಅವರು ಹೇಳಿದ್ದಾರೆ. ಇನ್ನು ಮುಂದಾದರೂ ಸರ್ಕಾರದವರು ಹಣವನ್ನು ವೆಚ್ಚ ಮಾಡುವಾಗ, ಅಂದಾಜುಗಳನ್ನು ತಯಾರು ಮಾಡುವಾಗ ಕೆಲಸ ಚೆನ್ನಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಖ್ಯಮಂತ್ರಿಗಳು ಈಗ ಸಭೆಯಲ್ಲಿಲ್ಲ. ನಿನ್ನೆ ಕೂಡ ಅವರು ಹೇಳಿದರು 'ಹೆಚ್ಚುಕಡಮೆ ಖರ್ಚಾಗುತ್ತದೆ, ಏನುಮಾಡುವುದು, ಒಂದೊಂದುಕಡೆ ಅಗೆದರೆ ಕಲ್ಲು ಸಿಕ್ಕುತ್ತದೆ, ಇನ್ನೊಂದುಕಡೆ ಮಣ್ಣು ಸಿಕ್ಕುತ್ತದೆ, ಹೀಗೆಲ್ಲ ಆಗುತ್ತದೆ' ಎಂದು ಹೇಳಿದರು. ಅಂದಾಜು ಮಾಡುವ ಉದ್ದೇಶವೇನು? ಕಲ್ಲು ಎಲ್ಲಿ ಸಿಕ್ಕುತ್ತದೆ, ಮಣ್ಣೆಲ್ಲಿ ಸಿಕ್ಕುತ್ತದೆ ಎಂಬ ಉದ್ದೇಶದಿಂದಲೇ ಮೊದಲು ಅಂದಾಜು ಮಾಡುವುದು.

ಶರಾವತಿ ಪ್ರಾಜೆಕ್ಟಿಗೆ ಸಂಬಂಧಪಟ್ಟಹಾಗೆ ಅಂದಾಜಿಗಿಂತ 60 ಲಕ್ಷ ರೂಪಾಯಿ ಹೆಚ್ಚಿಗೆ ಕೊಡಬೇಕೆಂದಾದರೆ ಎಸ್ಟಿಮೇಟ್ ಮಾಡಿದ್ದೇನು? ಎಸ್ಟಿಮೇಟ್ ಮಾಡುವಾಗಲೇ ತೀರ್ಥಹಳ್ಳಿಯಿಂದ ಯಾವ ವಸ್ತು ಬರಬೇಕು, ಹೊನ್ನಾಳಿಯಿಂದ ಯಾವ ವಸ್ತು ಬರಬೇಕು ಎಂಬುದನ್ನೆಲ್ಲ ನೋಡಿತಾನೆ ಮಾಡುವುದು. ಆದ್ದರಿಂದ ಮುಖ್ಯಮಂತ್ರಿಗಳು ಇಂಥ ಒಂದು ಹೇಳಿಕೆ ಕೊಡುವುದು ದೇಶಕ್ಕಾಗಲಿ, ಜನತೆಗಾಗಲೀ ಸಮಾಧಾನ ಕೊಡುತ್ತದೆಂದು ನಾನು ನಂಬುವುದಿಲ್ಲ.

ಕಾಲಾವಕಾಶವಿಲ್ಲದಿರುವುದರಿಂದ ನಾನು ಈ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಕೊನೆಯದಾಗಿ, ಈ ವರದಿಗೆ

ಸರ್ಕಾರದವರು ಸೂಕ್ತವಾದ ಗಮನವನ್ನು ಕೊಡುತ್ತಾರೆ ಹಾಗೂ ಈಗಾಗಲೇ ಮಾಡಿರತಕ್ಕ ತಪ್ಪುಗಳನ್ನು ಸರ್ಕಾರ ತಿದ್ದಿಕೊಳ್ಳುತ್ತದೆಂದು ಆಶಿಸಿ ನನ್ನ ಈ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಎಫ್. ಎ. ಕರಿಲಿಂಗಣ್ಣನವರ್ (ಗೋಕಾಕ್-I).—ಅಧ್ಯಕ್ಷರೇ, ಈಗ ನಮ್ಮ ಮುಂದಿರುವಂಥ ಎ. ಜಿ. ರಾಮಚಂದ್ರರಾಯರ ರಿಪೋರ್ಟನ್ನು ಚರ್ಚೆ ಮಾಡಿ ನಮ್ಮ ಸಲಹೆ ಸೂಚನೆಗಳನ್ನು ಕೊಡಬೇಕಾಗಿದೆ ಮತ್ತು ಎ. ಜಿ. ಆರ್ ಕಮಿಟಿಯವರು ಮಾಡಿರುವ ಸಲಹೆಗಳನ್ನು ಸರ್ಕಾರದವರು ಎಷ್ಟರ ಮಟ್ಟಿಗೆ ಆಡಳಿತದಲ್ಲಿ ಜಾರಿಗೆ ತರಬೇಕೆಂಬುದನ್ನು ನಿರ್ಧರಿಸಬೇಕಾಗಿದೆ. ಈ ಸಂದರ್ಭದಲ್ಲಿ ಈ ಸಮಿತಿಯವರು ಮಾಡಿರುವ ಅನೇಕ ಸಲಹೆಗಳ ಪೈಕಿ ಕೆಲವನ್ನು ನಾನು ಪ್ರಸ್ತಾಪಿಸ ಬಯಸುತ್ತೇನೆ.

ಮೊದಲನೆಯದಾಗಿ, ಈಗ ಇಲ್ಲಿ ನಾವು 5 ಭಾಗಗಳಿಂದ ಬಂದಂಥ ಜನರಿದ್ದರೂ ಸರ್ಕಾರದವರು ಏಕರೂಪವಾದ ರೀತಿಯಲ್ಲಿ ರಾಜ್ಯಾಡಳಿತವನ್ನು ನಡೆಸುವಂಥ ಏರ್ಪಾಡನ್ನು ಇದುವರೆಗೂ ಮಾಡಿಲ್ಲ. ನಾವು ಒಂದಾಗಿ ಈಗಾಗಲೇ ಆರು ವರುಷವಾಯಿತು. ಇದರಿಂದಾಗಿ ಹೊರಗಿನಿಂದ ಬಂದಿರುವ ಜನರಮೇಲೆ ಬಹಳ ಅನ್ಯಾಯವಾಗುತ್ತಿದೆ. ಏಕೆಂದರೆ, ಎ. ಜಿ. ಆರ್ ಸಮಿತಿಯವರು ತೆರಿಗೆಯನ್ನು ಹಾಕಬೇಕು, ನಮ್ಮ ಮೂರನೆಯ ಯೋಜನೆಗೆ ಹಣವನ್ನು ಬರಮಾಡಿಕೊಳ್ಳಬೇಕು, ಅನೇಕ ಪ್ರಾಜೆಕ್ಟುಗಳನ್ನು ಮಾಡಿ ನಮ್ಮಲ್ಲಿರುವ ಉದ್ಯೋಗದ ಅವಕಾಶವನ್ನು ಜಾಸ್ತಿಮಾಡಬೇಕು ಎಂದೆಲ್ಲಾ ಹೇಳಿರುವ ಮಾತುಗಳೇನೋ ಯೋಗ್ಯವಾದುವೇ. ಆದರೆ ಈ ತೆರಿಗೆಯ ಹೊರೆಯನ್ನು ಯಾರ ಮೇಲೆ ಹಾಕಬೇಕು? ಇದು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡುವ ವಿಷಯವಾಗಿದೆ. ಸಾಮಾನ್ಯ ಜನರ ಮೇಲೆ, ಸಾಮಾನ್ಯ ರೈತನ ಮೇಲೆ ತೆರಿಗೆ ಬೀಳಬಾರದು. ಏನಿದ್ದರೂ ಹೆಚ್ಚು ಜಮೀನುಳ್ಳವರಿಗೆ, ಪ್ಲಾಂಟೇಷನ್ ಮುಂತಾದುವುಗಳನ್ನುಳ್ಳ ಹಣವಂತರ ಮೇಲೆ ಟ್ಯಾಕ್ಸ್ ಹಾಕಿದರೆ ನ್ಯಾಯವೆನ್ನಬಹುದು. ಅದು ಬಿಟ್ಟು ಸಾಮಾನ್ಯ ರೈತನ ಮೇಲೆ ತೆರಿಗೆ ಹಾಕಿದ್ದಲ್ಲಿ, ಬಿಸಿಲು, ಮಳೆ ಚಳಿ, ಗಾಳಿಗಳನ್ನು ಸಹಿಸಿಕೊಂಡಿರುವ ರೈತರ ಮೇಲೆಯೇ ತೆರಿಗೆ ಬಿದ್ದಲ್ಲಿ ಪರಿಣಾಮವೇನಾಗುತ್ತದೆಂಬುದನ್ನು ನೀವೇ ಯೋಚನೆ ಮಾಡಿ. ಉದಾಹರಣೆಗೆ, ಘಟಪ್ರಭ ಸುತ್ತಮುತ್ತಲ ಹಳ್ಳಿಗಳಿಗೂ ಇಲ್ಲಿನ ಹಳ್ಳಿಗಳಿಗೂ ಇರತಕ್ಕ ವ್ಯತ್ಯಾಸ ನೋಡುವುದಾದರೆ, ಅಲ್ಲಿ ಕಂದಾಯ ಏಕರೆಗೆ 62 ರೂಪಾಯಿ ಜೊತೆಗೆ 22 ರೂಪಾಯಿಗಳು ಲೋಕಲ್ ಮುಂತಾದ ಸೆಸ್ಸು ಬೀಳುತ್ತಿದ್ದರೆ, ಇಲ್ಲಿ ಕೇವಲ 10-15 ರೂಪಾಯಿ ಮಾತ್ರ ಬೀಳುತ್ತಿದೆ ಹೀಗಿರುವಲ್ಲಿ ಈಗ ನೀವು ಭೂಕಂದಾಯದ ಮೇಲೆ ಮತ್ತೆ ಕರ ಸರ್ವೇಸಾಮಾನ್ಯವಾಗಿ ಹೇರಿದರೆ ಅಲ್ಲಿನ ರೈತರ ಮೇಲೆಯೂ ಮತ್ತೆ ಹೊರೆಬಿದ್ದು ಆ ರೈತರ ಬೆನ್ನು ಮುರಿದುಹೋಗುತ್ತದೆ. ಒಂದೇ ರಾಜ್ಯವಾಯಿತೆಂದಮೇಲೆ ಅಲ್ಲಿನ ರೈತರಿಗೇ ಒಂದು ದರ, ಇಲ್ಲಿನ ರೈತರಿಗೇ ಒಂದು ದರ ಹಾಕುವುದು ಯಾವ ನ್ಯಾಯ? ಎಷ್ಟೋವೇಳೆ ಇದೇ ವಿಷಯವನ್ನು ಸಭೆಯಲ್ಲಿ ಹೇಳಿದ್ದೇವೆ. ಆದರೂ ಏನೂ ಆಗಿಲ್ಲ. ಇನ್ನಾದರೂ ತೀವ್ರಗತಿಯಿಂದ ಏಕರೂಪವಾದ ತೆರಿಗೆಯ ಪದ್ಧತಿಯನ್ನು ಮೊದಲು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಘಟಪ್ರಭಾ ಹಿಡಕಲ್ ಯೋಜನೆ ಕೈಕೊಂಡು ಬಹಳ ದಿವಸವಾದರೂ ಕೆಲಸ ಇನ್ನೂ ನಿಧಾನವಾಗಿ ನಡೆದಿದೆ. ಆ ಯೋಜನೆಯನ್ನು ತೀವ್ರ ಮುಗಿಸಿದರೆ ರೈತರಿಗೆ ಸಾಕಷ್ಟು ನೀರು ಸಿಕ್ಕಿ ಹೆಚ್ಚಿಗೆ ಬೆಳೆ ಬೆಳೆಯಬಹುದು.

ಮತ್ತೊಂದು ವಿಷಯವೇನೆಂದರೆ ಎ. ಜಿ. ಆರ್. ಕಮಿಟಿಯವರು ಕೃಷ್ಣರಾಜ ಸಾಗರದ ಕೆಳಗೆ ಕೈಗಾರಿಕೆಗಳಿಗೆ ನೀರನ್ನು ಪೂರೈಸುವ ಧಾರಣೆಯನ್ನು ಹೆಚ್ಚಿಸುವ ಹಾಗೂ ಏಕರೂಪ ಮಾಡುವ ಬಗ್ಗೆ ಸಲಹೆ ಮಾಡಿದ್ದಾರೆ. ಆದರೆ ಘಟಪ್ರಭಾ ನೀರನ್ನು ಗೋಕಾಕ್ ಫಾಲ್ಸದವರೆಗೆ ಅತ್ಯಂತ ಕಮ್ಮಿ ದರದಿಂದ ಕೊಡುತ್ತಿದ್ದು, ಅದನ್ನು ಹೆಚ್ಚಿಸುವ ಬಗ್ಗೆ ಯಾವುದೇ ಸಲಹೆ ಮಾಡಿಲ್ಲ. ಅಲ್ಲಿಯ ರೈತರಿಗೆ ಹೆಚ್ಚಿನ ಭಾರ ಬೀಳುತ್ತಿದ್ದು ಗೋಕಾಕ್‌ಮಿಲ್ಸದವರಿಗೆ ತೀರಾ ಕಡಿಮೆ ಇರುವುದು ಅನ್ಯಾಯವಿದೆ. ಅದನ್ನು ಹೆಚ್ಚಿಸಿ ರೈತರ ಮೇಲಿನ ಭಾರ ಕಡಿಮೆ ಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, 'ಬಂಡಿಂಗ್' ವಿಚಾರ ತೆಗೆದುಕೊಳ್ಳುತ್ತೇನೆ. ಇಡಕ್ಕೆ ಸೆಂಟ್ರಲ್ ಗೌರ್ನಮೆಂಟಿನವರು ಸೇಕಡ $12\frac{1}{2}$ ರೂಪಾಯಿ ಸಬ್ಸಿಡಿ ಕೊಡುತ್ತಾರೆ; ರಾಜ್ಯ ಸರ್ಕಾರದವರು ಸೇಕಡ $12\frac{1}{2}$ ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಈ ಹಣ ನೇರವಾಗಿ ರೈತರಿಗೆ ಮುಟ್ಟಬೇಕು. ಆ ರೀತಿ ಮಾಡಿದರೆ ಬೇಗ ರೈತರಿಗೆ ಮುಟ್ಟುತ್ತದ. ಹಾಗೆ ಮಾಡದೆ, ಈ ದಿವಸ ಕೇಂದ್ರ ಹಾಗೂ ರಾಜ್ಯ ಸರ್ಕಾರದವರೂ ಕೊಡುವ ಹಣವೆಲ್ಲಾ ಪಗಾರದ ರೂಪದಲ್ಲಿ ಖರ್ಚಾಗುತ್ತಿದೆ. ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಕನಿಷ್ಠ ಪಕ್ಷ ಕೇಂದ್ರ ಸರ್ಕಾರದವರು ಕೊಡುವ ಶೇಕಡ $12\frac{1}{2}$ ರೂಪಾಯಿಗಳಾದರೂ ರೈತರಿಗೆ ನೇರವಾಗಿ ಮುಟ್ಟಬೇಕು.

ಮತ್ತೊಂದು ವಿಷಯ; ಲೋಕಲ್ ಬೋರ್ಡ್‌ಗಳು ವಜಾ ಆದುವು. ಈಗ ಅಲ್ಲಿದ್ದ ನೌಕರರಿಗೆ ಕೆಲಸವಿಲ್ಲದೆ ಇದ್ದಾರೆ. ಆ ಎಂಜಿನಿಯರು, ಸಬ್-ಓವರ್‌ಸಿಯರುಗಳಿಗೆ ಏನೂ ಕೆಲಸವಿಲ್ಲ. ಬೇರೆ ಕಡೆಯಲ್ಲಿ ಯಾರಾದರೋ ಎಂಜಿನಿಯರು ಬೇಕೆಂದು ಕೇಳಿದರೆ 'ಇಲ್ಲ' ಎನ್ನುತ್ತಾರೆ. ಇನ್ನು ಮೇಲಾದರೂ ಇಲ್ಲಿರತಕ್ಕ ಎಂಜಿನಿಯರು ಮತ್ತು ಸಬ್-ಓವರ್‌ಸಿಯರುಗಳನ್ನು ಬೇರೆ ಕೆಲಸ ವಿರುವ ಕಡೆಗೆ ಕಳಿಹಸಿಕೊಡಬೇಕೆಂದು ಹೇಳುತ್ತೇನೆ.

ಆಮೇಲೆ land valuation ವಿಷಯ. ಈ ಭಾಗದಲ್ಲಿ ಒಂದು ಎಕರೆಗೆ 10,000 ರೂಪಾಗಳಷ್ಟು ಬೆಲೆ ಕಟ್ಟುತ್ತಾರೆ. ನಮ್ಮ ಕಡೆಗಳಲ್ಲಿ ಇನ್ನೂ valuation ಮಾಡದಿರುವುರಿಂದ, ನಮ್ಮ ಭಾಗದ ಜನರು ಸಾಲ ಸೋಲ ತೆಗೆದುಕೊಳ್ಳುವುದು ಬಹಳ ಕಷ್ಟ. ಇದರಿಂದಾಗಿ ನಮ್ಮ ಭಾಗದಲ್ಲಿರತಕ್ಕ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳು ಕೆಲಸವಿಲ್ಲದೆ ಸ್ಥಗಿತವಾಗಿವೆ. ಇದು ತಪ್ಪಬೇಕಾದರೆ ಎಲ್ಲಾಕಡೆಯಲ್ಲೂ ಸಮರೂಪವಾದ valuation ಪದ್ಧತಿ ಬರಬೇಕು. ಆದಕಾರಣ land valuation ನ್ನನ್ನು ತೀವ್ರವಾಗಿ ಕೈಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಶಿಕ್ಷಣ ಇಲಾಖೆ ನೋಡಿ. ಕಾಲೇಜ್ ಫೀಜ್‌ಗಳ ಮಟ್ಟ ಇಲ್ಲಿ ಒಂದು ರೀತಿಯಿದೆ. ಉತ್ತರ ಕರ್ನಾಟಕದಲ್ಲಿ ಒಂದು ರೀತಿಯಿದೆ. ಮೊನ್ನೆಮೊನ್ನೆ ತಾನೆ ಇಲ್ಲಿ 120 ರೂಪಾಯಿ ಗೊತ್ತುಮಾಡಿದೆ. ಅಲ್ಲಿ ಮೊದಲಿನಿಂದಲೂ 220 ರೂಪಾಯಿ ಕೊಡುತ್ತಿದ್ದಾರೆ. ಇದೇಕೆ ಈ ವ್ಯತ್ಯಾಸ? ಸರ್ಕಾರಕ್ಕೆ ಧೈರ್ಯವಿಲ್ಲವೇ? ಎಲ್ಲ ಭಾಗದಲ್ಲೂ ಒಂದೇ ತೆರನಾದ ಫೀಜನ್ನು ಜಾರಿಗೆ ತರಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಈ ಪ್ರಕಾರ ಎಲ್ಲ ವಿಷಯಗಳಲ್ಲೂ ದೇಶದ ಎಲ್ಲ ಕಡೆಯಲ್ಲಿಯೂ ಒಂದೇ ರೀತಿಯ ವ್ಯವಸ್ಥೆಯನ್ನು ಮಾಡುವುದಾದರೆ, ಒಂದೇ ತೆರನಾಗಿ ಹೊಸ ತೆರಿಗೆ

(ಶ್ರೀ ಎಸ್. ಗೋಪಾಲಗೌಡ)

ಗಳನ್ನು ಹೊರಲು ಆಕ್ಷೇಪಣೆ ಮಾಡುವುದಿಲ್ಲವೆಂದು ನಾನು ಹೇಳುತ್ತೇನೆ.

5-00 P.M.

ಏಕೆಂದರೆ ಸಾದೆಸ್ತಿಗೆ ಮತ್ತೊಂದು ಹೇರು ಎನ್ನುವಂತೆ ಅವರಿಗೆ ಮತ್ತೊಂದು ಭಾರವನ್ನು ಹೊರಿಸಬೇಕೆಂದು ಇದ್ದಾರೆ. ಉತ್ತರ ಕರ್ಣಾಟಕ ಹೈದರಾಬಾದ್ ಕರ್ಣಾಟಕದವರನ್ನು ಅಲಕ್ಷ್ಯದೃಷ್ಟಿಯಿಂದ ನೋಡುತ್ತಾರೆ ಎನಿಸುತ್ತದೆ. ಇದನ್ನೆಲ್ಲಾ ಹೋಗಲಾಡಿಸಿ ಸಮದೃಷ್ಟಿಯನ್ನು ಸರ್ಕಾರದವರು ಇಟ್ಟುಕೊಳ್ಳಬೇಕು. ಐದು ಭಾಗಗಳಲ್ಲಿಯೂ ಒಂದೇ ರೂಪ, ಒಂದೇ ಕಾಯಿದೆ, ಒಂದೇ ಆಡಳಿತ ಆಗಬೇಕು ಎಂದು ನಾನು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

